EMAIL : dairyadadaari@gmail.com ಸಂಪುಟ: 01 ಸಂಚಿಕೆ: 24
ಬೆಲೆ ರೂ : 2.00
ರಾಯಚೂರು
ಪುಟ: 4
ನಿಮ್ಮ ನಂಬಿಕೆಯ ಧ್ವನಿ
# ಧೈರ್ಯದ ದಾರಿ
ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ
Cell : 6360866626, 9036887793
KANNADA DAILY NEWS PAPER
ಕನ್ನಡ ದಿನಪತ್ರಿಕೆ
DAIRYADA DAARI
RNI NO: KNKAN/25/A2795
ಮಂಗಳವಾರ: 30-12-2025

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
6360866626

## ಹೊಸ ವರ್ಷಾಚರಣೆ ವೇಳೆ ಅಹಿತಕರ ಘಟನೆಗಳು ನಡೆಯದಂತೆ ಸುರಕ್ಷತಾ ಕ್ರಮಕ್ಕೆ ಎಂ.ಎ.ಸಲೀಂ ಸೂಚನೆ

**ಬೆಂಗಳೂರು,ಡಿ.29:** ಹೊಸ ವರ್ಷಾಚರಣೆ ಸಂದರ್ಭದಲ್ಲಿ ರಾಜ್ಯದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ಆಗದಂತೆ ಸುರಕ್ಷತಾ ಕ್ರಮ ಕೈಗೊಳ್ಳಬೇಕೆಂದು ರಾಜ್ಯದ ಪೊಲೀಸ್ ಮಹಾ ನಿರ್ದೇಶಕರಾದ ಡಾ.ಎಂ.ಎ ಸಲೀಂ ಅವರು ಆದೇಶಿಸಿದ್ದಾರೆ.

ರಾಜ್ಯದ ಎಲ್ಲಾ ಜಿಲ್ಲಾ ಎಸ್‌ಪಿಗಳು, ವಲಯದ ಐಜಿಪಿಗಳು ಹಾಗೂ ನಗರಗಳ ಪೊಲೀಸ್ ಆಯುಕ್ತರುಗಳಿಗೆ 17 ಅಂಶಗಳುಳ್ಳ ಮಾರ್ಗಸೂಚಿಗಳನ್ನು ಕಳುಹಿಸಿದ್ದು, ಈ ಮಾರ್ಗಸೂಚಿಗಳನ್ವಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಅವರು ತಿಳಿಸಿದ್ದಾರೆ.
ವಾಹನಗಳ ನಿರಂತರ ಗಸ್ತು, ಪೊಲೀಸರ ಕಾಲ್ನಡಿಗೆ ಗಸ್ತು, ಅಶ್ವಾರೋಹಿ, ಬೈಕ್ ಗಸ್ತುಗಳು ಸಾರ್ವಜನಿಕರಲ್ಲಿ ಪೊಲೀಸರ ಗೋಚರತೆಯನ್ನು ಹೆಚ್ಚಿಸುತ್ತದೆ ಹಾಗೂ ತುರ್ತು ಪ್ರತಿಕ್ರಿಯೆ ಸಾಧ್ಯವಾಗಿಸುತ್ತದೆ.

ಪೂರ್ವನಿಯೋಜಿತ ಸ್ಥಳಗಳಲ್ಲಿ ಟ್ರಾಫಿಕ್ ಮತ್ತು ಎಸ್‌ಡಬ್ಲೂಎಟಿ ತಂಡಗಳನ್ನು ಒಳಗೊಂಡಂತೆ ಎಲ್ಲಾ ಘಟಕಗಳನ್ನು ನಿಯೋಜಿಸಿಕೊಳ್ಳುವುದು ಹಾಗೂ ಎಲ್ಲಾ ಚೆಕ್‌ಪೋಸ್ಟ್‌ಗಳಲ್ಲಿ



ವಿಡಿಯೋಗ್ರಾಫಿ ಮಾಡಿಸುವುದು.
ಸಿಸಿಟಿವಿ, ಡ್ರೋನ್ ಮತ್ತು ನೈಜ ಸಮಯದ ಕ್ರೌಡ್ ಟ್ರ್ಯಾಕಿಂಗ್ ವ್ಯವಸ್ಥೆಗಳ ಮೂಲಕ ಜನಸಾಂದ್ರತೆಯ ಮೇಲ್ವಿಚಾರಣೆ, ವರ್ತನೆಯ ಸ್ವರೂಪ ಮತ್ತು ಒತ್ತಡಗಳು ಸಂಭವಿಸುವ ಸಾಧ್ಯತೆಗಳನ್ನು ನಿರ್ಧರಿಸಿ, ಅಗತ್ಯ ಕ್ರಮ ಕೈಗೊಳ್ಳಬೇಕು.
ತರಬೇತಿ ಪಡೆದ ಭದ್ರತಾ ಸಿಬ್ಬಂದಿಯನ್ನು ಚೆಕ್‌ಪೋಸ್ಟ್‌ಗಳಲ್ಲಿ ನಿಯೋಜಿಸಿ, ಲೋಹ ಶೋಧಕಗಳು, ಬ್ಯಾಗ್ ತಪಾಸಣೆ ಮತ್ತು ಟಿಕೆಟ್ ಪರಿಶೀಲನೆಯೊಂದಿಗೆ ಪ್ರವೇಶವನ್ನು ನಿಯಂತ್ರಿಸಿ ಅಪಾಯಗಳನ್ನು ಪತ್ತೆ ಹಚ್ಚುವ ಕ್ರಮಗಳನ್ನು ಕೈಗೊಳ್ಳುವುದು.

ಮಹಿಳೆಯರನ್ನು ಚುಡಾಯಿಸುವುದನ್ನು ತಡೆಯಲು ಮಹಿಳಾ ಪೊಲೀಸ್ ತಂಡಗಳನ್ನು ನಿಯೋಜಿಸಿ, ಆಂಬ್ಯುಲೆನ್ಸ್, ಅಗ್ನಿಶಾಮಕ ಮತ್ತು ವೈದ್ಯಕೀಯ ತಂಡಗಳನ್ನು ಸಿದ್ಧ ಸ್ಥಿತಿಯಲ್ಲಿ ಇಟ್ಟು ಸ್ಪಷ್ಟ ನಿರ್ಗಮನ ಮಾರ್ಗಗಳನ್ನು ಸಾರ್ವಜನಿಕವಾಗಿ ಪ್ರಕಟಿಸುವುದು ಡ್ರೋನ್ ಮತ್ತು ಸಿಸಿಟಿವಿಗಳ ಮೂಲಕ ನೈಜ ಸಮಯದ ನಿಗಾವಣೆ ಮಾಡುವಂತೆ ಆದೇಶಿಸಿದ್ದಾರೆ.

ಸ್ಥಳೀಯ ಅವಶ್ಯಕತೆಗಳಿಗೆ ಅನುಗುಣವಾಗಿ ಹೆಚ್ಚುವರಿ ಭದ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಮಾರ್ಗಸೂಚಿಗಳ ನಿರ್ದೇಶನಗಳನ್ನು ಕಟ್ಟು ನಿಟ್ಟಾಗಿ ಪಾಲಿಸುವಂತೆ ಸಲೀಂ ಅವರು ಸೂಚಿಸಿದ್ದಾರೆ.

## 2.5 ಲಕ್ಷ ಗಡಿದಾಟಿದ ಬೆಳ್ಳಿ ದರ



**ನವದೆಹಲಿ,ಡಿ.29:**ವರ್ಷಾಂತ್ಯದ ಮೊದಲು, ಬೆಳ್ಳಿ ಬೆಲೆಗಳು ಹೊಸ ಮೈಲಿಗಲ್ಲನ್ನು ತಲುಪಿವೆ. ದೇಶದ ಫ್ಯೂಚರ್ಸ್ ಮಾರುಕಟ್ಟೆಯಲ್ಲಿ ಬೆಳ್ಳಿ ಬೆಲೆಗಳು ಮೊದಲ ಬಾರಿಗೆ 2.5 ಲಕ್ಷದ ಗಡಿಯನ್ನು ದಾಟಿವೆ. ಈ ಹೆಚ್ಚಳವು 14,400 ರಷ್ಟು ಹೆಚ್ಚಳವನ್ನು ಪ್ರತಿನಿಧಿಸುತ್ತದೆ, ಬೆಲೆ 2,54,174 ಕ್ಕೆ ತಲುಪಿದೆ.

### ಕೃಷಿ, ಪಶುವೈದ್ಯಕೀಯ ಮತ್ತು ಕೃಷಿಗೆ ಸಂಬಂಧಿತ ವಿಷಯಗಳ ಕುರಿತು ಅಂತಾರಾಷ್ಟ್ರೀಯ ಸಮ್ಮೇಳನ

## ಹತ್ತಿ ಬೆಳೆ ಕ್ಷೇತ್ರದಲ್ಲಿ ಹೊಸ ಸಂಶೋಧನೆ ನಡೆಯಲಿ: ಡಾ.ಶ್ರೀನಿವಾಸ ರಾವ್ ಸಲಹೆ

ಧೈರ್ಯದ ದಾರಿ

**ರಾಯಚೂರು,ಡಿ.29–** ರಾಯಚೂರು ಜಿಲ್ಲೆಯಲ್ಲಿ ಹತ್ತಿ ಬೆಳೆಯು ಯಥೇಚ್ಛವಾಗಿದ್ದು, ಈ ಭಾಗದ ಹತ್ತಿ ಬೆಳೆಗಾರರಿಗೆ ಅನುಕೂಲವಾಗುವ ರೀತಿಯಲ್ಲಿ ಹೊಸ ಸಂಶೋಧನೆಗಳು ನಡೆಯಬೇಕಿದೆ ಎಂದು ದೆಹಲಿಯ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ. ಶ್ರೀನಿವಾಸ ರಾವ್ ಅವರು ಹೇಳಿದರು.

ಡಿಸೆಂಬರ್ 29ರ ಸೋಮವಾರ ದಂದು ನಗರದ ಕೃಷಿ ವಿವಿಯ ಜಗಜ್ಯೋತಿ ಬಸವೇಶ್ವರ ಸಭಾಂ ಗಣದಲ್ಲಿ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿ ದ್ಯಾಲಯ, ರಾಷ್ಟ್ರೀಯ ಕೃಷಿ ಅಭಿವೃದ್ಧಿ ಸಹಕಾರಿ ನಿಯಮಿತ, ಬಾರಾಮುಲ್ಲಾ, ಜಮ್ಮು ಮತ್ತು ಕಾಶ್ಮೀರ ಇವರ ಸಹಯೋಗದಲ್ಲಿ ಮೂರು ದಿನಗಳ ಅವಧಿಯ ಕೃಷಿ, ಪಶುವೈದ್ಯಕೀಯ ಮತ್ತು ಕೃಷಿಗೆ ಸಂಬಂಧಿತ ವಿಷಯಗಳಲ್ಲಿ ಸುಸ್ಥಿರ ನಾವಿನ್ಯತೆಗಳ ಕುರಿತಾದ ಅಂತರಾಷ್ಟ್ರೀಯ ಸಮ್ಮೇಳನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ದೇಶದೆಲ್ಲೆಡೆ 2002ರಲ್ಲಿ ಉತ್ತಮವಾಗಿ ಬೆಳೆದು ಭರವಸೆ ಮೂಡಿಸಿದ ಬಿಟಿ ಹತ್ತಿ ತಳಿಯು ಕ್ರಮೇಣ ಕೀಟಬಾಧೆಗೆ ತುತ್ತಾಗಿದ್ದು, ನಾವಿನ್ಯತೆಯ ಮೂಲಕ ಹೊಸ ತಳಿಯನ್ನು ಕಂಡುಹಿಡಿಯಬೇಕಾಗಿದೆ. ಹತ್ತಿ ಬಿಡಿಸುವಿಕೆಯ ಸಣ್ಣ ಉಪಕರಣಗಳ ತಯಾರಿಕೆ ಹಾಗೂ ಉತ್ತಮ ರೀತಿಯ ಬ್ಯಾಗೇಜ್‌ನ ಅವಶ್ಯಕತೆಯಿದೆ. ಇವೆರಡನ್ನೂ ವಿಶ್ವವಿದ್ಯಾಲಯವು ಪರಿಗಣಿಸಿ ಕ್ರಮವಹಿಸಬೇಕಾಗಿದೆ ಎಂದರು.

ನಾವಿನ್ಯತೆ ಎಂದರೆ ಹೊಚ್ಚ-ಹೊಸದು, ಹೆಚ್ಚಿನ ಪ್ರಗತಿ ಹಾಗೂ ನಿರಂತರವಲ್ಲದ್ದನ್ನು ಬಿಟ್ಟು ಪ್ರಸ್ತುತಿಗೆ ಹೊಂದಿಕೊಳ್ಳುವ ಬಗ್ಗೆ




ವಿಚಾರ ಮಾಡುವುದಾಗಿದೆ. ಕೃಷಿ ಮತ್ತು ಜಾನುವಾರು ಕೃಷಿ ಕ್ಷೇತ್ರಗಳ ಅಭಿವೃದ್ಧಿಗೆ ಕೃಷಿ ವಿಶ್ವವಿದ್ಯಾಲಯ ಮತ್ತು ಕೃಷಿಗೆ ಸಂಬಂಧಿಸಿದ ಸಂಸ್ಥೆಗಳು ಒತ್ತು ಕೊಡಬೇಕು. ಈ ಬಗ್ಗೆ ರಾಯ ಚೂರಿನ ಕೃ.ವಿ.ವಿಯು ತನ್ನ ಕೊಡುಗೆಯು ಬಗ್ಗೆ ಪರಾಮರ್ಶಿಸಬೇಕೆಂದು ಕಿವಿಮಾತು ಹೇಳಿದರು.

ಮಳೆಮಾರುತ ಮತ್ತು ಮಾರುಕಟ್ಟೆಗಳ ಸಮಸ್ಯೆಗಳತ್ತ ವಿಶ್ವವಿದ್ಯಾಲಯವು ಗಮನಹರಿಸಿ ರೈತರ ಏಳಿಗೆಗೆ ಸಹಕರಿಸಬೇಕು. ತುಂತುರು ನೀರಾವರಿ, ಫಲೀಕರಣ, ನಿವ್ವಳ ಶೂನ್ಯ ಹೊರಸೂಸುವಿಕೆ ಇತ್ಯಾದಿಗಳ ಬಗ್ಗೆ ಗಮನ ನೀಡಬೇಕು. ಕೊಯ್ಲೋತ್ತರ ನಷ್ಟವು ಕೃಷಿಯ ಅಭಿವೃದ್ಧಿಗೆ ಮಾರಕವಾಗಿದ್ದು, ಶೇ.30 ರಷ್ಟು ಆಹಾರವು ಪ್ರತಿ ವರ್ಷ ನಷ್ಟವಾಗುತ್ತಿದ್ದು, ಇದರ ಬೆಲೆ ವಾರ್ಷಿಕವಾಗಿ 1.3 ಲಕ್ಷ ಕೋಟಿಗಳಷ್ಟಾ ಗಿರುವುದು ಬೇಸರದ ಸಂಗತಿಯಾಗಿದೆ. ಆದ್ದರಿಂದ ರೈತರೇ ಜೀವಾಳ, ರೈತರಿಲ್ಲದಿದ್ದರೆ ಯಾವುದೇ ಕೃಷಿ ವಿಶ್ವವಿದ್ಯಾಲಯ ಇರುವುದಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ನಾವೆಲ್ಲರೂ ರೈತರ ಅಭಿವೃದ್ಧಿಗೆ ಶ್ರಮಿಸಬೇಕೆಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಎಂ.ಹನುಮಂತಪ್ಪ ಅವರು ವಹಿಸಿ ಮಾತನಾಡಿ, ಈ ವಿಶ್ವವಿದ್ಯಾಲಯವು ರೈತರ ಅಭಿವೃದ್ಧಿಗೆ ಪೂರಕವಾಗಿರುವ ಎಲ್ಲಾ ವ್ಯವಸ್ಥೆಗಳನ್ನು ಹೊಂದಿದ್ದು, ಇಲ್ಲಿ ಅಭಿವೃದ್ಧಿಪಡಿಸಿದ ಹಲವಾರು ತಂತ್ರಜ್ಞಾನಗಳು ರೈತರಿಗೆ ತಲುಪುತ್ತಿವೆ. ಆದಾಗ್ಯೂ ಕೂಡ ಇನ್ನೂ ಹೆಚ್ಚಿನ ರೀತಿಯಲ್ಲಿ ಅಂದರೆ, ಆಹಾರ ಉತ್ಪಾದನೆಯ ಮೌಲ್ಯವರ್ಧನೆ, ಬ್ರಾಂಡಿಂಗ್, ಪ್ಯಾಕೆಜಿಂಗ್‌ಗಳಲ್ಲಿ ಪ್ರಗತಿಯನ್ನು ಸಾಧಿಸಬೇಕಾಗಿದೆ. ವಿಶ್ವವಿದ್ಯಾಲಯದ ಜೈವಿಕ ಉತ್ಪಾದನಾ ಘಟಕ, ಬೀಜ ಘಟಕ, ಪೀಡೆನಾಶಕಗಳ 2ನೇಪುಟಕ್ಕೆ►

## ಹಿರಿಯ ಪತ್ರಕರ್ತ ಗಣೇಶ್ ಪಾಟೀಲ್‌ಗೆ ಕುವೆಂಪು ಪ್ರಶಸ್ತಿ



**ಯಾದಗಿರಿ:ಡಿ.29:**ಮಾಧ್ಯಮ ಕ್ಷೇತ್ರದಲ್ಲಿ ಕಳೆದ 16 ವರ್ಷಗಳ ಸೇವೆ ಪರಿಗಣಿಸಿ ಹಿರಿಯ ಪತ್ರಕರ್ತ ಗಣೇಶ್ ಪಾಟೀಲ್ ಅವರಿಗೆ ಕುವೆಂಪು ಪ್ರಶಸ್ತಿ ನೀಡಿ ಗೌರವಿಸಲಾಗಿದೆ.
ಯಾದಗಿರಿ ನಗರದ ಪಂಪ ಮಹಾಕವಿ ಮಂಟಪದಲ್ಲಿ ಜಯ ಕರ್ನಾಟಕ ರಕ್ಷಣಾ ವೇದಿಕೆಯಿಂದ ಕುವೆಂಪು ಪ್ರಶಸ್ತಿ ನೀಡಲಾಯಿತು.

ನಾಲವಾರ ಶ್ರೀ ಮಠದ ತೋಟೇಂದ್ರ ಮಹಾಸ್ವಾಮಿಗಳು ಪ್ರಶಸ್ತಿ ನೀಡಿ ಗೌರವಿಸಿದ್ದರು. ಈ ವೇಳೆ ಶ್ರೀಗಳಿಗೆ ಮಾಜಿ ಸಚಿವ ಶಿವನಗೌಡ ನಾಯಕ್ ಸರಿಗಮಪ ಖ್ಯಾತಿಯ ಬಾಳು ಬೆಳಗುಂದಿ ಕು.ಲಲಿತಾ ಅನಪೂರ್ ಹಾಗೂ ಜಯ ಕರ್ನಾಟಕ ಸಂಘದ ಜಿಲ್ಲಾಧ್ಯಕ್ಷ ವಿಶ್ವನಾಥ್ ನಾಯಕ ಸಾಥ್ ನೀಡಿದ್ದು, ಹಲವರು ಉಪಸ್ಥಿತರಿದ್ದರು.
ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಪತ್ರಕರ್ತ ಗಣೇಶ್ ಪಾಟೀಲ್ ಈ ಪ್ರಶಸ್ತಿ ಇನ್ನಷ್ಟು ಜವಾಬ್ದಾರಿ ಹೆಚ್ಚಿಸಿದೆ. ನಾನು ಪ್ರಾಮಾಣಿಕವಾಗಿ ನಿರಂತರ ಸೇವೆ ಸಲ್ಲಿಸಲು ಅಣಿಯಾಗಿದ್ದೇನೆಂದು ಹೇಳಿದ್ದರು.

## ಜಾತಿಗಳ ಜಾಡ್ಯಕ್ಕೆ ಕುವೆಂಪು ಸಾಹಿತ್ಯವೇ ಔಷಧಿ:ನರಸಿಂಹ ಹೆಚ್




ಧೈರ್ಯದ ದಾರಿ

**ಮಾನ್ವಿ,ಡಿ.29–**ಧರ್ಮವು ಒಂದು ನಡಾ ವಳಿಯೆ ಹೊರತು ಅದು ನಂಬಿಕೆಯಲ್ಲ. ಪರಸ್ಪರ ಧರ್ಮ ಗಳನ್ನು ದ್ವೇಷಿಸದೆ ಪ್ರೀತಿ, ಸಹೋದರತೆಯಿಂದ ಸರ್ವಧರ್ಮಗಳನ್ನು ಗೌರವಿಸುವ ವ್ಯಕ್ತಿಯೆ ವಿಶ್ವಮಾನವನಾಗಲು ಸಾಧ್ಯ ಎಂದು ಕರ್ನಾಟಕ ರಕ್ಷಣಾ ವೇದಿಕೆ ಹೆಚ್ ಶಿವರಾಮೇಗೌಡ ಬಣದ ತಾಲೂಕ ಅಧ್ಯಕ್ಷ ನರಸಿಂಹ ಹೆಚ್ ಹೇಳಿದರು.

ಪಟ್ಟಣದ ಕೋನಾಪುರ ಪೇಟೆ ಪ್ರೌಢಶಾಲೆಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಕನ್ನಡಪರ ಸಂಘಟ ನೆಗಳ ಒಕ್ಕೂಟ ವತಿಯಿಂದ ಹಮ್ಮಿಕೊಂಡಿದ್ದ ಮಹಾಕವಿ ಕುವೆಂಪು ಜನ್ಮೋತ್ಸವ ಕಾರ್ಯ ಕ್ರಮದಲ್ಲಿ ಮಾತನಾಡಿದರು.ಇದೇ ವೇಳೆ ನಿವೃತ್ತ ವೀರನಗೌಡ ಪೊಲೀಸ್ ರವರು ಮಾತನಾಡಿ

ಅನಾದಿ ಕಾಲದಿಂದಲೂ ಭಾರತೀಯ ಸಮಾ ಜದಲ್ಲಿ ಬೇರೂರಿರುವ ವರ್ಣಾಶ್ರಮ ವ್ಯವಸ್ಥೆ ದೇಶದ ಪ್ರಗತಿಗೆ ಮಾರಕವಾಗಿದೆ. ಎಲ್ಲಿಯ ವರೆಗೂ ಈ ಜಾತಿ ವ್ಯವಸ್ಥೆ ಜೀವಂತ ಇರೋ ವರೆಗೂ ಅಸಮಾನತೆ, ಹಿಂಸೆ, ಅತ್ಯಾಚಾರವ ನ್ನು ಕಾಣಬಹುದಾಗಿದೆ. ಇಂತಹ ಜಾತಿ ವ್ಯವಸ್ಥೆ, ಮೂಢನಂಬಿಕೆ ಮತ್ತು ಕಂದಾಚಾರಗಳ ಬಗ್ಗೆ ತಮ್ಮ ಲೇಖನಿ ಮೂಲಕ ವಿರೋಧಿಸಿದ ರಾಷ್ಟ್ರ ಕವಿ ಕುವೆಂಪು ಅವರು ಶೂದ್ರ ವರ್ಗದ ಕವಿಯಾಗಿ ಹೊರಹೊಮ್ಮಿದ್ದರು. ಜಾತಿ, ಮೌಢ್ಯತೆ ಮತ್ತು 2ನೇಪುಟಕ್ಕೆ►

## ಸನ್ ರೈಸ್ ಕಾಲೇಜಿನಲ್ಲಿ ನಾಯಿ ಕಚ್ಚು, ಹಾವು ಕಚ್ಚು ಹಾಗೂ ಡೆಂಗ್ಯೂ ಕುರಿತು ಜಾಗೃತಿ ಕಾರ್ಯಕ್ರಮ

ಧೈರ್ಯದ ದಾರಿ

**ಸಿಂಧನೂರು : ಡಿ 29:** ತಾಲ್ಲೂಕು ಆರೋಗ್ಯ ಕಚೇರಿಯ ಮಾರ್ಗದರ್ಶನದಲ್ಲಿ ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್, ಪ್ಯಾರಾಮೆಡಿಕಲ್ ಕಾಲೇಜಿನಲ್ಲಿ ನಾಯಿ ಕಚ್ಚು ಮತ್ತು ಹಾವು ಕಚ್ಚು ತಡೆ ಹಾಗೂ ಚಿಕಿತ್ಸೆ ಕುರಿತು ಜಾಗೃತಿ ಕಾರ್ಯಕ್ರಮ ಯಶಸ್ವಿಯಾಗಿ ಆಯೋಜಿಸಲಾಯಿತು. ಈ ಜಾಗೃತಿ ಉಪನ್ಯಾಸವನ್ನು ಶ್ರೀ ನಿಖಿಲ್ ಮಹಾಮಾರಿ ತಜ್ಞರು, ತಾಲ್ಲೂಕು ಆರೋಗ್ಯ ಕಚೇರಿ ಸಿಂಧನೂರು ಅವರು ನಡೆಸಿಕೊಟ್ಟರು.
ಉಪನ್ಯಾಸದಲ್ಲಿ ಅವರು ನಾಯಿ ಕಚ್ಚು ಹಾಗೂ ಹಾವು ಕಚ್ಚಿನ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾದ ತಕ್ಷಣದ ಪ್ರಥಮ ಚಿಕಿತ್ಸೆ, ತಪ್ಪಿಸಬೇಕಾದ ಅನೈಜ್ಞಾನಿಕ ಪದ್ಧತಿಗಳು, ಸಮಯಕ್ಕೆ ಸರಿಯಾಗಿ ಸಮೀಪದ ಸರ್ಕಾರಿ ಆರೋಗ್ಯ ಕೇಂದ್ರಕ್ಕೆ ತೆರಳುವ ಅಗತ್ಯತೆ ಮತ್ತು ಲಸಿಕೆ/ಂಟಿ ವೆನಮ್ ಚಿಕಿತ್ಸೆಯ ಮಹತ್ವವನ್ನು ವಿವರಿಸಿದರು. ಸಾರ್ವಜನಿಕರು ಭಯಪಡದೇ, ಜಾಗೃತಿಯಿಂದ ಸರಿಯಾದ ಚಿಕಿತ್ಸೆಯನ್ನು ಪಡೆದುಕೊಳ್ಳಬೇಕು ಎಂದು ತಿಳಿಸಿದರು.
ಅದೇ ಕಾರ್ಯಕ್ರಮದಲ್ಲಿ ಡೆಂಗ್ಯೂ ಜಾಗೃತಿ ಉಪನ್ಯಾಸವನ್ನು ಅಬ್ದುಲ್ ರಹಿಮಾನ್ ಹಣಗಿ ಅವರು ನೀಡಿದರು. ಡೆಂಗ್ಯೂ ರೋಗದ ಹರಡುವ ವಿಧಾನ, ಲಕ್ಷಣಗಳು, ಅಪಾಯ ಸೂಚನೆಗಳು ಹಾಗೂ ತಡೆಗಟ್ಟುವ ಕ್ರಮಗಳ ಕುರಿತು ವಿವರಿಸಿ, ಮನೆಯ ಸುತ್ತಮುತ್ತ ನೀರು ನಿಲ್ಲದಂತೆ ನೋಡಿಕೊಳ್ಳುವುದು, ಸೊಳ್ಳೆ ಪರದೆ ಕಟ್ಟುವುದರ ಮೂಲಕ ತಡೆಯುವುದು ಹಾಗೂ ಜ್ವರ ಕಾಣಿಸಿಕೊಂಡ ಕೂಡಲೇ ಆರೋಗ್ಯ ಕೇಂದ್ರಕ್ಕೆ ವರದಿ



ಮಾಡುವ ಅಗತ್ಯತೆಯನ್ನು ತಿಳಿಸಿದರು. ಕಾರ್ಯಕ್ರಮದ ಆರಂಭದಲ್ಲಿ ಸ್ವಾಗತ ಹಾಗೂ ಪರಿಚಯವನ್ನು ಲಾಜರ್ ಸಿರಿಲ್ ಜಿ ಅವರು ನೀಡಿದರು. ಸಮುದಾಯದ ಆರೋಗ್ಯ ರಕ್ಷಣೆಯಲ್ಲಿ ಇಂತಹ ಜಾಗೃತಿ ಕಾರ್ಯಕ್ರಮಗಳ ಪಾತ್ರ ಅತ್ಯಂತ ಮಹತ್ವದ್ದು ಎಂದು ಅವರು ತಿಳಿಸಿ, ಸಾರ್ವಜನಿಕರು ಆರೋಗ್ಯ ಇಲಾಖೆಯೊಂದಿಗೆ ಸಹಕರಿಸುವಂತೆ ಮನವಿ ಮಾಡಿದರು.
ಈ ಜಾಗೃತಿ ಕಾರ್ಯಕ್ರಮವು ಸಾರ್ವಜನಿಕರಲ್ಲಿ ನಾಯಿ ಕಚ್ಚು, ಹಾವು ಕಚ್ಚು ಹಾಗೂ ಡೆಂಗ್ಯೂ ಕುರಿತು ಅರಿವು ಹೆಚ್ಚಿಸುವಲ್ಲಿ ಮಹತ್ವದ ಪಾತ್ರ ವಹಿಸಿತು. ಕಾರ್ಯಕ್ರಮದಲ್ಲಿ ತಾಲೂಕ ಆರೋಗ್ಯ ಅಧಿಕಾರಿಗಳ ಕಚೇರಿಯ ಅಧಿಕಾರಿಗಳಾದಂತ ಶ್ರೀ ನಿಖಿಲ್ ಹೊಸಮನಿ ಎಂಡೊಮೊಲಜಿಸ್ಟ್ ರೋಗವಾಹಕ ಆಶ್ರಿತ ಕಾರ್ಯಕ್ರಮದ ಮೇಲ್ವಿಚಾರಕರು ಆದ ಶ್ರೀ ಹಣಗಿ ಮತ್ತು ಸನ್ ರೈಸ್ ವಿದ್ಯಾಸಂಸ್ಥೆಯ ಕಾರ್ಯದರ್ಶಿಗಳಾದ ಇರ್ಷಾದ್ ಕೆ ಅತ್ತಾರ್ ಹಾಗೂ ಎಲ್ಲಾ ಉಪನ್ಯಾಸಕರುಗಳು, ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದು, ಕುವೆಂಪು ಅವರ ಆದರ್ಶಗಳನ್ನು ಸ್ಮರಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲೆಗೆ ವಿಭಾಗ ಮಟ್ಟದಲ್ಲಿ ಪ್ರಥಮ ಸ್ಥಾನ

ಧೈರ್ಯದ ದಾರಿ



**ರಾಯಚೂರು,ಡಿ.29**–ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕದ 2024-25ನೇ ಸಾಲಿನ ಜಿಲ್ಲೆಯ ಸಮಗ್ರ ಚಟುವಟಿಕೆಗಳ ಅಭಿವೃದ್ಧಿಯನ್ನು ಪರಿಗಣಿಸಿ ರಾಯಚೂರು ಜಿಲ್ಲೆಗೆ ಕಲಬುರಗಿ ವಿಭಾಗೀಯ ಮಟ್ಟದಲ್ಲಿ ಪ್ರಥಮ ಸ್ಥಾನವನ್ನು ಗಳಿಸಿರುವುದಕ್ಕೆ ಪ್ರೋ.ಕೆ ಶಿವಶಂಕರ್ ಪರ್ಯಾಯ ಪಾರಿತೋಷಕ ಪ್ರಶಸ್ತಿಯನ್ನು ಮಾನ್ಯ ಶ್ರೀ ಪಿ.ಜಿ.ಆರ್ ಸಿಂಧ್ಯ ರಾಜ್ಯ ಮುಖ್ಯ ಆಯುಕ್ತರು ಇವರು ನೀಡಿ ಗೌರವಿಸಿದರು.

ಇದೇ ಸಂದರ್ಭದಲ್ಲಿ ಶ್ರೀ ಬಸವರಾಜ ಬೋರೆಡ್ಡಿ ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಬಸವರಾಜ ಗದಗಿನ ಜಿಲ್ಲಾ ಆಯುಕ್ತರು (ಸ್ಕೌ), ಶ್ರೀಮತಿ ರಾಜಶ್ರೀ ಸಜ್ಜನ್ ಜಂಟಿ ಕಾರ್ಯದರ್ಶಿಗಳು (ಗೈ), ಶ್ರೀಮತಿ ರಜನಿ.ಡಿ ರಾಜ್ಯ ಪರಿಷತ್ ಸದಸ್ಯರು (ಗೈ), ಶ್ರೀ ಬೀರಪ್ಪ ಶಂಭೋಜಿ ಸಹಾಯಕ ಜಿಲ್ಲಾ ಆಯುಕ್ತರು (ಸ್ಕೌ), ಶ್ರೀ ಮಲ್ಲಪ್ಪ ಕುಂಬಾರ ಸಹಾಯಕ ಜಿಲ್ಲಾ ಆಯುಕ್ತರು ಇವರು ಪ್ರಶಸ್ತಿಯನ್ನು ಸ್ವೀಕರಿಸಿದರು.

# 140ನೇ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆ

ಧೈರ್ಯದ ದಾರಿ



**ಲಿಂಗಸಗೂರು : ಡಿ 29**–ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ 140ನೇ ಸಂಸ್ಥಾಪನಾ ದಿನಾಚರಣೆಯನ್ನು ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯರಾದ ಶರಣಗೌಡ ಪಾಟೀಲ್ ಬಯ್ಯಾಪುರ್ ರವರು ನೇತೃತ್ವ ವಹಿಸಿದರು . ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟು, ರಾಷ್ಟ್ರದ ಏಕತೆ, ಅಖಂಡತೆ ಹಾಗೂ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ ಕಾಂಗ್ರೆಸ್ ಪಕ್ಷದ ಎಲ್ಲಾ ಹಿರಿಯ ನಾಯಕರು ಮತ್ತು ಮಹಾನ್ ತ್ಯಾಗಿಗಳನ್ನು ಈ ಸಂದರ್ಭದಲ್ಲಿ ಸ್ಮರಿಸಿ ಕಾಂಗ್ರೆಸ್ ಪಕ್ಷವು ದೇಶದ ಪ್ರಜಾಪ್ರಭುತ್ವದ ರಕ್ಷಣೆಗೆ ಹಾಗೂ ಸಾಮಾಜಿಕ ನ್ಯಾಯದ ಅನುಷ್ಠಾನಕ್ಕೆ ನೀಡಿರುವ ಕೊಡುಗೆಗಳನ್ನು ಸ್ಮರಿಸಿದರು.

ಈ ಸಂದರ್ಭದಲ್ಲಿ ನಗರ ಯೋಜನೆ ಪ್ರಾಧಿಕಾರದ ಅಧ್ಯಕ್ಷ ಭೂಪನಗೌಡ ಪಾಟೀಲ ಕರಡಕಲ್, ಗ್ಯಾರಂಟಿ ಯೋಜನೆಗಳ ಜಿಲ್ಲಾ ಅಧ್ಯಕ್ಷ ಪಾಮಯ್ಯ ಮುರಾರಿ, ಗುಂಡಪ್ಪ ನಾಯಕ್, ಸೋಮಶೇಖರ್ ಐದನಾಳ, ಪ್ರಮೋದ ಕುಲ್ಕರ್ಣಿ, ಶರಣಬಸವ ವಾರದ್, ಶಿವನಗೌಡ ವಂದಲ್ಲಿ, ಅನಿಷ್ ಪಾಷಾ, ಅಮರೇಶ ಮೆದಿನಪುರ, ವೆಂಕಟೇಶ ಕಳ್ಳಿಲಿಂಗಸಗೂರು, ನಾಗರಾಜ್ ಕುಪ್ಪಣ್ಣ, ಲಾಲಪ್ಪ ರಾಠೋಡ, ಜಗದೀಶ ಪಾಟೀಲ್, ಪ್ರಕಾಶ್ ಕುರಿ, ಶಿವಾಜಿ ಕಟ್ಟಿಮನಿ, ಶರಣಪ್ಪ ಹುನುಕುಂಟಿ, ಮೋಹನ್ ಗೋಸ್ಲೆ ಕರಡಕಲ್, ಮೌನೇಶ ತೊಪ್ಪಲ್ ದೊಡ್ಡಿ ಸೇರಿದಂತೆ ಪಕ್ಷದ ಹಿರಿಯ ಮುಖಂಡರು, ಪದಾಧಿಕಾರಿಗಳು ಕಾರ್ಯಕರ್ತರು ಉಪಸ್ಥಿತರಿದ್ದರು.

# ಪಗಡದಿನ್ನಿ – ರಕ್ತದಾನ ಶಿಬಿರ ಕಾರ್ಯಕ್ರಮ

ಧೈರ್ಯದ ದಾರಿ



**ಸಿಂಧನೂರು,ಡಿ.29**– ಪಗಡದಿನ್ನಿ ಗ್ರಾಮ ಪಂಚಾಯತ್ ಅರಿವು ಕೇಂದ್ರ, ಹಾಗೂ ದೇವರಗುಡಿ ಗ್ರಾಮದಲ್ಲಿ ಅಜೀಮ್ ಪ್ರೇಮಜೀ ಫೌಂಡೇಶನ್ ರಾಯಚೂರು ಹಾಗೂ ಶ್ರೀ ಶಕ್ತಿ ರಕ್ತ ಕೇಂದ್ರ ಸಿಂಧನೂರು ರವರ ಸಹಯೋಗದಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು.

ತಾಲೂಕಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಪಗಡದಿನ್ನಿ ಆವರಣದಲ್ಲಿ ರವಿವಾರ ಈ ರಕ್ತದಾನ ಶಿಬಿರ ಕಾರ್ಯಕ್ರಮವನ್ನು ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಎನ್ ಬಸವರಾಜ ಉದ್ಘಾಟಿಸಿದರು.

ಕಾರ್ಯಕ್ರಮ ಉದ್ದೇಶಿಸಿ ಶಾಲಾ ಮುಖ್ಯ ಗುರುಗಳಾದ ಪರಸಪ್ಪ ಮಾತನಾಡಿ ದಾನಗಳಲ್ಲಿ ರಕ್ತದಾನ ಮಹಾದಾನ ಜನರ ಜೀವ ರಕ್ಷಣೆಗೆ ರಕ್ತ ಅತ್ಯವಶ್ಯಕವಾಗಿದ್ದು, ರಕ್ತದ ಅವಶ್ಯಕತೆ ಇರುವ ವ್ಯಕ್ತಿಗಳಿಗೆ ರಕ್ತದಾನ ಮಾಡುವುದರ ಮೂಲಕ ಎಲ್ಲರೂ ಜನರ ಅಮೂಲ್ಯವಾದ ಜೀವ ರಕ್ಷಣೆಗೆ ಮುಂದಾಗಬೇಕು ಎಂದರು.

ನೊಬೆಲ್ ಕಾಲೇಜ್ ವಿದ್ಯಾರ್ಥಿ ಬಸನಗೌಡ 22 ಸಾರಿ ರಕ್ತದಾನ ಮಾಡಿ ಜೀವನ ಉಳಿಸುವುದರ ಜೊತೆಗೆ ಮಾನವೀಯತೆ ಮೆರೆದಿದ್ದಾನೆ. ಒಟ್ಟು 14 ಜನ ರಕ್ತದಾನ ಮಾಡಿದರು.

ಇದೇ ಸಂದರ್ಭದಲ್ಲಿ ಊರಿನ ಮುಖಂಡರಾದ ಶರಣೇಗೌಡ,ಬಸನಸಗೌಡ ಸಿಂಧನೂರು,ನಿರುಪಾದಿ, ಗ್ರಾಮ ಪಂ. ಸದಸ್ಯರಾದ ,ಪಂಪಾಪತಿ ,ದುಗ್ಗಪ್ಪ, ಎಸ್ ಡಿ ಎಂ ಸಿ ಅಧ್ಯಕ್ಷ ಶರಣಬಸವ,ಫೌಂಡೇಶನ್ ಸಂಚಾಲಕ ಅಯ್ಯನಗೌಡ, ನಿಕಟ ಪೂರ್ವ ಬಿಆರ್‌ಪಿ ರವಿ ಪವಾರ್, ಹಾಗೂ ಮೈನುದ್ದೀನ್, ಷಣ್ಮುಖ ಗೌಡ,

ಗ್ರಂಥಾಲಯ ಮೇಲ್ವಿಚಾರಕರು ಹಾಗೂ ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗ ,ಶಾಲಾ ಶಿಕ್ಷಕರು,ಕಾಲೇಜು ಉಪನ್ಯಾಸಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು

# ಯರಗೇರಾದ ಶ್ರೀ ದರ್ಗಾ ಹಜರತ್ ಬಡೇಸಾಹೇಬ್ ಉರುಸಿನಲ್ಲಿ ಶಾಸಕರು ಭಾಗಿ



ಧೈರ್ಯದ ದಾರಿ

**ರಾಯಚೂರು,ಡಿ.29**–ರಾಯಚೂರು ಗ್ರಾಮೀಣ ಕ್ಷೇತ್ರ ವ್ಯಾಪ್ತಿಯ ಯರಗೇರಾ ಗ್ರಾಮದಲ್ಲಿ ಸರ್ವಧರ್ಮ ಭಾವೈಕ್ಯತೆಯ ಸಂಕೇತವಾದ ಶ್ರೀ ದರ್ಗಾ ಹಜರತ್ ಬಡೇಸಾಹೇಬ್ ಉರುಸಿನಲ್ಲಿ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಶಾಸಕರಾದ ಬಸನಗೌಡ ದದ್ದಲ್ ಅವರು ಭಾಗವಹಿಸಿ ಆಶೀರ್ವಾದ ಪಡೆದರು.

ಈ ಸಂಧರ್ಭದಲ್ಲಿ ಊರಿನ ಹಿರಿಯ ಮುಖಂಡರು, ಸುತ್ತಲಿನ ಗ್ರಾಮಗಳ ಮುಖಂಡರು, ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಗ್ರಾಮಸ್ಥರು ಹಾಗೂ ಭಕ್ತಾಧಿಗಳು ಉಪಸ್ಥಿತರಿದ್ದರು.

## ಮೊದಲನೇ ಪುಟದಿಂದ

# ಹತ್ತಿ ಬೆಳೆ ಕ್ಷೇತ್ರದಲ್ಲಿ ಹೊಸ ಸಂಶೋಧನೆ ನಡೆಯಲಿ: ಡಾ.ಶ್ರೀನಿವಾಸ ರಾವ್ ಸಲಹೆ

ಅವಶೇಷಗಳ ವಿಶ್ಲೇಷಣಾ ಘಟಕಗಳು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಮೆಣಸಿನಕಾಯಿ ಬಾಧಿಸುವ ಬ್ಲಾಯಕ್ ತ್ರಿಪ್ಸ್ ನಿರ್ವಹಣೆಯಲ್ಲಿ ನಮ್ಮ ವಿಶ್ವವಿದ್ಯಾಲಯದ ಜೈವಿಕ ಉತ್ಪಾದನಾ ಘಟಕದ ಕೊಡುಗೆ ಅಪಾರವಾಗಿದೆ. ಅಂತೆಯೇ ಬೀಜ ಉತ್ಪಾದನಾ ಘಟಕವು ಪ್ರಸ್ತುತ 22,000 ಕ್ವಿಂಟಲ್ ಬೀಜ ಉತ್ಪಾದಿಸಿ ರೈತರಿಗೆ ಮಾರಾಟ ಮಾಡಲಾಗಿದೆ. ಬರುವ ದಿನಗಳಲ್ಲಿ ಸಿರಿಧಾನ್ಯಗಳ ಮೌಲ್ಯವರ್ಧಿತ ಪಾರ್ಕ್ ಕೂಡ ಈ ವಿಶ್ವವಿದ್ಯಾಲಯದಲ್ಲಿ ಸ್ಥಾಪನೆಯಾಗಲಿದ್ದು, ಸಣ್ಣ ಮತ್ತು ಅತಿಸಣ್ಣ ಸಿರಿಧಾನ್ಯ ಬೆಳೆಗಾರರಿಗೆ ವರದಾನವಾಗಲಿದೆ ಎಂದರು.

ವಿಶ್ವವಿದ್ಯಾಲಯವು ಕೃಷಿ ಯಂತ್ರೋಪಕರಣಗಳ ಅಭಿವೃದ್ಧಿ ಹಾಗೂ ಬಳಕೆಗೆ ಮಹತ್ವ ನೀಡಿದ್ದು, ಭತ್ತದಲ್ಲಿ ಭೂಮಿ ತಯಾರಿಕೆಯಿಂದ ಹಿಡಿದು ಕೊಯ್ಲೋತ್ತರದವರೆಗೆ ಬೇಕಾಗುವ ಸಣ್ಣ-ಸಣ್ಣ ಉಪಕರಣಗಳನ್ನು ಅಭಿವೃದ್ಧಿಪಡಿಸಿ ರೈತರ ಬಳಕೆಗೆ ನೀಡಿದೆ. ಕೃಷಿ ತಾಂತ್ರಿಕ ತಂತ್ರಜ್ಞಾನ ಮತ್ತು ಬೆಳೆ ಸಂರಕ್ಷಣೆ ವಿಷಯಗಳಲ್ಲಿ 14 ಪೇಟೆಂಟ್‌ಗಳು ದೊರೆತಿವೆ. ಹಾಗೂ ಕೃಷಿ ತಾಂತ್ರಿಕ ವಿಭಾಗದ 12 ವಿದ್ಯಾರ್ಥಿಗಳು ಗೇಟ್ ಪರೀಕ್ಷೆಯನ್ನು ತೇರ್ಗಡೆ ಮಾಡಿರುವರು ಎಂದು ನೆರೆದಿದ್ದ ಸಮ್ಮೇಳನಾರ್ಥಿಗಳಿಗೆ ತಿಳಿಸಿದರು.

ಜಾನುವಾರುಗಳ ಆಹಾರ ಕೊರತೆಯನ್ನು ನೀಗಿಸಲು ಹೈಡ್ರೋಪೋನಿಕ್ ತಂತ್ರಜ್ಞಾನ ಮತ್ತು ಅಝೋಲ್ಲಾಗಳ ಉತ್ಪಾದನೆಗೆ ವಿಶ್ವವಿದ್ಯಾಲಯವು ಒತ್ತು ನೀಡಿದೆ. ಆದ್ದರಿಂದ, ಕೃಷಿಯೇ ನಮಗೆ ಮೂಲ ಸಂಸ್ಕೃತಿ, ಕೃಷಿ ಇಲ್ಲದಿದ್ದರೆ ಯಾವ ಸಂಸ್ಕೃತಿಯು ಇರಲು ಸಾಧ್ಯವಿಲ್ಲ. ರೈತರೇ ಜೀವಾಳ, ಅವರ ಏಳ್ಗೆಯೆತ್ತ ನಾವೆಲ್ಲರೂ ಸಾಗೋಣ ಎಂದರು.

ಈ ವೇಳೆ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಯ ಸದಸ್ಯರಾದ ಮಲ್ಲಿಕಾರ್ಜುನ ಡಿ ಅವರು ಮಾತನಾಡಿ, ವಿಶ್ವವಿದ್ಯಾಲಯವು ಹಲವಾರು ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿದರೂ ಕೂಡ ಅವುಗಳ ಬಳಕೆ ರೈತರ ಮಟ್ಟದಲ್ಲಿ ಬಹಳ ಕಡಿಮೆಯಿದೆ. ಇದರ ಬಗ್ಗೆ ವಿಶ್ವವಿದ್ಯಾಲಯವು ಗಮನಹರಿಸಬೇಕು ಹಾಗೂ ವಿಶ್ವವಿದ್ಯಾಲಯದಲ್ಲಿ ರೈತರಿಗೆ ಬೇಕಾಗಿರುವ ಸಮಗ್ರ ಕೃಷಿ ಮತ್ತು ಸಂಪನ್ನ ಕೃಷಿ ಪ್ರಾತ್ಯಕ್ಷಿಕೆ ತಾಕುಗಳ ಪುನಶ್ಚೇತನವಾಗಬೇಕಾಗಿದೆ ಎಂದರು.

ಈ ವೇಳೆ ಹೈದರಾಬಾದಿನ ಪಿ.ವಿ.ನರಸಿಂಹರಾವ್ ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕರಾದ ಪ್ರೊ. ಎಂ. ಕಿಶನ್‌ಕುಮಾರ, ಓಡಿಸ್ಸಾದ ಕೇಂದ್ರಿಯ ಭತ್ತ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ. ಜಿ. ಎ. ಕೆ. ಕುಮಾರ, ಬೀದರ್‌ನ ಪಶುವೈದ್ಯಕೀಯ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗದ ಡೀನ್‌ರಾದ ಡಾ. ದಿಲೀಪ್ ಕುಮಾರ, ಬಾರಾಮುಲ್ಲಾದ ಡಾ. ಆರ್. ಎ. ಶಾಹ ಅವರು ಮಾತನಾಡಿದರು.

ಇದಕ್ಕೂ ಮುಂಚೆ ಅಂತರಾಷ್ಟ್ರೀಯ ಸಮ್ಮೇಳನದ ಆಯೋಜನೆಯ ಉದ್ದೇಶವನ್ನು ಸಮ್ಮೇಳನದ ಆಯೋಜನಾ ಸಂಘಟಕರಾದ ಡಾ.ಜಾಗೃತಿ ಬಿ. ದೇಶಮಾನ್ಯ ಅವರು ಮಂಡಿಸಿದರು. ಅಲ್ಲದೆ ಈ ಸಮ್ಮೇಳನಕ್ಕೆ ಆಗಮಿಸಿದ ಎಲ್ಲಾ ಸಮ್ಮೇಳನಾರ್ಥಿಗಳನ್ನು, ಗಣ್ಯರನ್ನು, ನೆರೆದಿದ್ದ ಎಲ್ಲಾ ಸಭಿಕರನ್ನು ಸ್ವಾಗತಿಸಿದರು.

ಇದೇ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳಾದ ಬಸನಗೌಡ ಬ್ಯಾಗವಾಟ್, ಮಲ್ಲೇಶ ಕೊಲಿಮಿ, ತಿಮ್ಮಪ್ಪ ಸೋಮಪ್ಪ ಚವಡಿ, ಡಾ.ಕೆ.ನಾರಾಯಣ ರಾವ್, ಡಾ. ಜಿ. ಬಿ. ಲೋಕೇಶ್ ಸೇರಿದಂತೆ ವಿಶ್ವವಿದ್ಯಾಲಯದ ಅಧಿಕಾರಿವೃಂದ, ಪ್ರಾಧ್ಯಾಪಕವೃಂದ, ಸ್ನಾತಕೋತ್ತರ ವಿದ್ಯಾರ್ಥಿಗಳು ಇದ್ದರು.

# ಜಾತಿಗಳ ಜಾಡ್ಯಕ್ಕೆ ಕುವೆಂಪು ಸಾಹಿತ್ಯವೇ ಔಷಧಿ:ನರಸಿಂಹ ಹೆಚ್

ಅಂದಕಾರದ ಅಂಕುಶದಿಂದ ಹೊರಬಂದು ನಿರಂಕುಶಮತಿಗಳಾಗಿ ಎಂದು ಸಂದೇಶ ನೀಡಿದ ಮಹಾನ ಕವಿ ಕವೆಂಪು ಅವರು ಎಂದರು.ಇದೆ ವೇಳೆ ಸರ್ಕಾರಿ ಪ್ರೌಢಶಾಲೆ ವತಿಯಿಂದ ವೇದಿಕೆಯ ಮೇಲಿನ ಎಲ್ಲಾ ಗಣ್ಯರಿಗೆ ಸನ್ಮಾನಿಸಿ ಗೌರವಿ ಸಲಾಯಿತು.

ಈ ಸಂಧರ್ಬದಲ್ಲಿ ಯಲ್ಲಪ್ಪ ನಿಲಗಲ್ ತಾಲೂಕು ಗೌರವ ಅಧ್ಯಕ್ಷರು, ದೀಪಕ್ ಯಾದವ್ ತಾಲೂಕು ಪ್ರಧಾನ ಕಾರ್ಯದರ್ಶಿಗಳು, ಪತ್ರಕರ್ತ ಸಂಘದ ಅಧ್ಯಕ್ಷ ಅಶೋಕ್ ತಡ್ಕಲ್, ಕನ್ನಡ ಸಾಹಿತ್ಯ ಪರಿಷತ್ತು ತಾಲೂಕ ಅಧ್ಯಕ್ಷ ಶರಣಬಸವನೀರಮಾನ್ವಿ, ಉಪಾಧ್ಯಕ್ಷ ಗೂಳಪ್ಪ ಬೊಮ್ಮನಾಳ, ನಾಗರಾಜ್ ಶೆಟ್ಟಿ ಬಿಜೆಪಿ ಮುಖಂಡರು, ರವಿಕುಮಾರ್ ಮದ್ಲಾಪುರ್ ತಾಲೂಕು ಉಪಾಧ್ಯಕ್ಷರು,ಶಾಂತಕುಮಾರ್ ನಗರ ಘಟಕ ಗೌರವ ಅಧ್ಯಕ್ಷರು, ಮಹೇಂದ್ರ ನಾಯಕ್ ನಗರ ಘಟಕ ಅಧ್ಯಕ್ಷರು , ಸಿದ್ದಪ್ಪ ಮದ್ರಾಪುರ್, ಸನತ್ ಕುಮಾರ್ ಕುಮಾರ್, ನವೀನ್ ಕುಮಾರ್,ಶ್ರೀನಿವಾಸ್, ರಬ್ಬಣಕಲ್ , ತಾಯಪ್ಪ, ದೇವರಾಜ್, ವಿನಯ್ ಕುಮಾರ್ ಬಿ ಎಂ, ಅಂಜಿ ಯಾದವ್ ಸೇರಿದಂತೆ ಶಾಲಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಕಲಿಕಾ ಹಬ್ಬದಿಂದ ಮಕ್ಕಳ ಕಲಿಕಾ ಆಸಕ್ತಿ ಹೆಚ್ಚಿಸಲು ಸಾಧ್ಯ: ಬಿಇಓ ಸಾವಳಗಿ



ಧೈರ್ಯದ ದಾರಿ

**ತಾಳಿಕೋಟಿ,ಡಿ.29**– ಸರ್ಕಾರಿ ಶಾಲೆಗಳಲ್ಲಿ ಕಲಿಯುವ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಿ ಅವರ ಸರ್ವಾಂಗೀಣ ಪ್ರಗತಿಗಾಗಿ ಸರ್ಕಾರ ಹಾಗೂ ಶಿಕ್ಷಣ ಇಲಾಖೆ ಸಾಕಷ್ಟು ಯೋಜನೆಗಳನ್ನು ತಂದಿದೆ ಇದನ್ನು ಪ್ರಭಾವಪೂರ್ಣವಾಗಿ ಅನುಷ್ಠಾನಗೊಳಿಸಲು ಶಿಕ್ಷಕರು ಇನ್ನೂ ಹೆಚ್ಚಿನ ಪ್ರಯತ್ನವನ್ನು ಮಾಡಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಎಸ್. ಸಾವಳಗಿ ಹೇಳಿದರು. ಪಟ್ಟಣದ ಆಶ್ರಯ ಬಡಾವಣೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಅವರಣದಲ್ಲಿ ಜಿಪಂ ವಿಜಯಪುರ, ತಾಪಂ ತಾಳಿಕೋಟಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವಿಜಯಪುರ, ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ ಮುದ್ದೇಬಿಹಾಳ, ಸಮೂಹ ಸಂಪನ್ಮೂಲ ಕೇಂದ್ರ ತಾಳಿಕೋಟಿ ಇವರ ಸಹಯೋಗದಲ್ಲಿ ಹಮ್ಮಿಕೊಂಡ ಕ್ಲಸ್ಟರ್ ಮಟ್ಟದ 2025- 26ನೇ ಸಾಲಿನ ಎಫ್ ಎಲ್ ಏನ್ ಆಧಾರಿತ ಕಲಿಕಾ ಹಬ್ಬ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ವಿವಿಧ ಕಾರ್ಯಕ್ರಮಗಳ ಮೂಲಕ ಆಸಕ್ತಿಯನ್ನು ಸೃಷ್ಟಿಸಿ ಅವರಿಗೆ ಮೂಲಭೂತ ಸಾಕ್ಷರತೆ ಹಾಗೂ ಸಂಖ್ಯಾ ಜ್ಞಾನವನ್ನು ನೀಡಲು ಕಲಿಕಾ ಹಬ್ಬವನ್ನು ಹಮ್ಮಿಕೊಳ್ಳಲಾಗುತ್ತಿದೆ ಮಕ್ಕಳು ಇದರಲ್ಲಿ ಆಸಕ್ತಿಯಿಂದ ಭಾಗವಹಿಸಬೇಕು ಎಂದರು. ಅಕ್ಷರ ದಾಸೋಹ ಯೋಜನೆಯ ಸಹಾಯಕ ನಿರ್ದೇಶಕ ಡಾ.ಎಂ.ಎಂ.ಬೆಳಗಲ್ ಮಾತನಾಡಿ ಕಳೆದ 2 ವರ್ಷಗಳಿಂದ ಕಲಿಕಾ ಹಬ್ಬ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ ಇದರ ಮೂಲಕ ಎಫ್ ಎಲ್ ಏನ್ ಆಧಾರಿತ ಚಟುವಟಿಕೆಗಳನ್ನು ಮಕ್ಕಳಲ್ಲಿ ಬೆಳಸಲು ಇಲಾಖೆ ಪ್ರಯತ್ನಿಸುತ್ತಿದೆ, ಇದು ಮಕ್ಕಳನ್ನು ಸಂತಸದಾಯಕವಾದ ಕ್ರಿಯಾಶೀಲತೆ ಎಡೆಗೆ ತೆಗೆದುಕೊಂಡು ಹೋಗುವ ಕಾರ್ಯಕ್ರಮವಾಗಿದೆ ಎಂದರು. ಕರವೇ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಜೈ ಭೀಮ ಮುತ್ತಗಿ ಮಾತನಾಡಿ ಇವತ್ತು ಶಿಕ್ಷಣ ಆರೋಗ್ಯ ದಂತಹ ಮಹತ್ವದ ಸೇವಾ ಕ್ಷೇತ್ರಗಳು ಬಂಡವಾಳ ಷಾಹಿಗಳ ಸ್ವತ್ತಾಗುತ್ತಿರುವುದು ನೋವಿನ ಸಂಗತಿ, ಶಿಕ್ಷಣ ಮತ್ತು ಆರೋಗ್ಯ ಸಮಾಜದ ಖಡು ಬಡವರಿಗೆ ಸರಳವಾಗಿ ಸಿಗುವಂತಾಗಬೇಕು ಈ ನಿಟ್ಟಿನಲ್ಲಿ ಎಲ್ಲರೂ ಪ್ರಯತ್ನಿಸಬೇಕಾಗಿದೆ ನಮ್ಮ ಸಂಘಟನೆ ಸರ್ಕಾರಿ ಶಾಲೆಗಳನ್ನು ಉಳಿಸಿ ಬೆಳೆಸಲು ಇಲಾಖೆಯೊಂದಿಗೆ ಎಲ್ಲ ರೀತಿಯ ಸಹಕಾರವನ್ನು ನೀಡಲು ಸದಾ ಸಿದ್ಧವಾಗಿದೆ ಎಂದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕ ಅಧ್ಯಕ್ಷ ಬಿ.ಟಿ. ವಜ್ಜಲ್, ಕ್ಷೇತ್ರ ಸಮನ್ವಯಾಧಿಕಾರಿ ಆರ್. ಬಿ.ದಮ್ಮೂರಮಠ ಮಾತನಾಡಿದರು. ಇದೇ ಸಂದರ್ಭದಲ್ಲಿ ರಾಷ್ಟ್ರಕವಿ ಜ್ಞಾನ ಪೀಠ ಪ್ರಶಸ್ತಿ ಪುರಸ್ಕೃತ ಕುವೆಂಪು ಅವರ ಜನ್ಮ ದಿನಾಚರಣೆ ನಿಮಿತ್ಯ ಅವರ ಭಾವಚಿತ್ರಕ್ಕೆ ವಿಶೇಷ ಪೂಜೆಯನ್ನು ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಶಿಕ್ಷಣ ಸಂಯೋಜಕ ಎಸ್ ಎಸ್ ಹಿರೇಮಠ, ಎಸ್ ಡಿ ಎಂ ಸಿ ಅಧ್ಯಕ್ಷ ದಸ್ತಗೀರ ಬಿ.ಆರ್.ಪಿ.ಕಾಶಿನಾಥ ಸಜ್ಜನ, ಮುಖ್ಯ ಗುರುಗಳಾದ ಎಂ.ಬಿ.ನಾಗೂರ, ಗುರುಮಾತೆ ಎಸ್ ಹುನುಗುಂದ, ಬಿ.ಆರ್.ಸಿ.ರಾಜು ವಿಜಾಪುರ, ಬಾಲಾಜಿ ಸಿಂಗ್ ವಿಜಾಪುರ, ಶಿಕ್ಷಕಿ ಎಸ್.ಬಿ.ಹೂಗಾರ, ಎಸ್‌ಡಿಎಂಸಿ ಸದಸ್ಯ ರಫೀಕ ಚೋರಗಸ್ತಿ, ಅಲ್ತಾಫ್ ವಿಜಾಪುರ ಅಬೂಬಕರ್ ಲಾಹೋರಿ, ಶಿಕ್ಷಕ ಡಿ.ಜೆ.ಬಾಗೆವಾಡಿ,ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಶಿಕ್ಷಕ ಆರ್ ಎಂ ಕುಲಕರ್ಣಿ ಪ್ರಾರ್ಥಿಸಿದರು. ಸಿ ಆರ್ ಸಿ ರಾಜು ವಿಜಾಪುರ ಸ್ವಾಗತಿಸಿದರು. ಹಿರಿಯ ಶಿಕ್ಷಕಿ ಎಂ ಬಿ ಮೈಲೇಶ್ವರ ನಿರೂಪಿಸಿ ವಂದಿಸಿದರು.

## ಜೆಸ್ಕಾಂನಿಂದ ಡಿಸೆಂಬರ್ 30ರಂದು ವಿದ್ಯುತ್ ವ್ಯತ್ಯಯ

**ರಾಯಚೂರು,ಡಿ.29–** ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗ ವ್ಯಾಪ್ತಿಗೆ ಬರುವ 110/11 ಕೆವಿ ಚಿಕ್ಕಸೂಗೂರು, ಶಕ್ತಿನಗರ, ಯಾಪಲದಿನ್ನಿ, ಕೆಐಎಡಿಬಿ ಯರಮರಸ್ ಮತ್ತು 33/11ಕೆವಿ ಮಾಮಡಿದೊಡ್ಡಿ ವಿದ್ಯುತ್ ಉಪ ಕೇಂದ್ರಗಳಲ್ಲಿ ತುರ್ತು ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವ ಪ್ರಯುಕ್ತ ಡಿಸೆಂಬರ್ 30ರ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 01ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆರ್‌ಸೇಟಿನಿಂದ ಮಹಿಳಾ ಟೈಲರಿಂಗ್ ತರಬೇತಿಗೆ ಅರ್ಜಿ ಆಹ್ವಾನ

**ರಾಯಚೂರು,ಡಿ.29–**ಇಲ್ಲಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ (ಆರ್‌ಸೇಟಿ) ಇವರ ವತಿಯಿಂದ ಗ್ರಾಮೀಣ ನಿರುದ್ಯೋಗಿ ಮಹಿಳೆಯರಿಗಾಗಿ ಮಹಿಳಾ ಟೈಲರಿಂಗ್ ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ತರಬೇತಿಯು 2026ರ ಜನವರಿ 2ರಿಂದ ಪ್ರಾರಂಭವಾಗಿ 31ದಿನಗಳ ಕಾಲ ನಡೆಯಲಿದೆ. ತರಬೇತಿಯ ಅವಧಿಯಲ್ಲಿ ಅಭ್ಯರ್ಥಿಗಳಿಗೆ ಉಚಿತ ಊಟ ಹಾಗೂ ಉಚಿತ ವಸತಿ ಸೌಕರ್ಯದ ವ್ಯವಸ್ಥೆ ಇರುತ್ತದೆ. ಆಸಕ್ತರು 8 ನೇ ತರಗತಿ ವ್ಯಾಸಂಗ ಮಾಡಿರುವ 18 ರಿಂದ 45 ವರ್ಷದೊಳಗಿನ ವಯಸ್ಸು ಹೊಂದಿರುವ ಗ್ರಾಮೀಣ ಭಾಗದ ಬಿಪಿಎಲ್ ಅಭ್ಯರ್ಥಿಗಳು ಆಧಾರ್ ಕಾರ್ಡ್ ಜೆರಾಕ್ಸ್, ಗ್ರಾಮೀಣ ಪಡಿತರ ಚೀಟಿ (ಬಿಪಿಎಲ್, ಪಿಎಚ್‌ಎಚ್, ಎನ್‌ಪಿಎಚ್‌ಎಚ್ ಮತ್ತು ಆಯ್‌ವೈ) ಜೆರಾಕ್ಸ್, 4 ಫೋಟೋಗಳು, ಬ್ಯಾಂಕ್ ಪಾಸ್‌ಬುಕ್ ಜೆರಾಕ್ಸ್ ಹಾಗೂ ಪ್ಯಾನ್ ಕಾರ್ಡ್ ಜೆರಾಕ್ಸೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ (ಆರ್‌ಸೇಟಿ) ಆಶಾಪೂರು ರಸ್ತೆ, ರಾಯಚೂರು. ಅಥವಾ ಮೊಬೈಲ್ ಸಂಖ್ಯೆ: 8217382735, 9742470999ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯ ನಿರ್ದೇಶಕರಾದ ವಿಜಯಕುಮಾರ್ ಬಡಿಗೇರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಿಸೆಂಬರ್ 31ರಂದು ವಿಶ್ವ ವಿಕಲಚೇತನರ ದಿನಾಚರಣೆ

**ರಾಯಚೂರು,ಡಿ.29–**ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ವಿಕಲಚೇತನರಿಗಾಗಿ ಶ್ರಮಿಸುತ್ತಿರುವ ಸಂಘ ಹಾಗೂ ವಿವಿಧ ಒಕ್ಕೂಟಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳು ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ 2025ರ ಸಾಲಿನ ವಿಶ್ವ ವಿಕಲಚೇತನರ ದಿನಾಚರಣೆಯನ್ನು ಡಿಸೆಂಬರ್ 31ರ ಬೆಳಿಗ್ಗೆ 10.30 ಗಂಟೆಗೆ ನಗರದ ಪಂಡಿತ್ ಸಿದ್ದರಾಮ ಜಂಬಲದಿನ್ನಿ ರಂಗಮಂದಿರ ಹಮ್ಮಿಕೊಳ್ಳಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಜಿಲ್ಲೆಯ ವಿಕಲಚೇತನರು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜಿಲ್ಲಾ ಯೋಜನಾ ಸಮಿತಿ ಚುನಾವಣೆ ಅಧಿಸೂಚನೆ ಪ್ರಕಟ

**ರಾಯಚೂರು,ಡಿ.29–** ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಯಚೂರು ರವರಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್(ಜಿಲ್ಲಾ ಯೋಜನಾ ಸಮಿತಿ ಸದಸ್ಯರ ಚುನಾವಣೆ–2025) ನಿಯಮಗಳು 1996 ನಿಯಮ 08 ರಡಿ ರಾಯಚೂರು ಜಿಲ್ಲಾ ಯೋಜನಾ ಸಮಿತಿ ಸದಸ್ಯರ ಚುನಾವಣೆ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಪ್ರಸ್ತುತವಾಗಿ ನಗರ ಸ್ಥಳೀಯ ಸಂಸ್ಥೆಗಳಿಂದ 06 ಸದಸ್ಯರನ್ನು (ಪುರಸಭೆ, ಮಸ್ಕಿ ಮತ್ತು ಪಟ್ಟಣ ಪಂಚಾಯತ್, ಕವಿತಾಳ, ತುರವಿಹಾಳ, ಬಳಗಾನೂರು ಮತ್ತು ಸಿರವಾರ ಮತಕ್ಷೇತ್ರ ಒಳಗೊಂಡಂತೆ) ಆಯ್ಕೆ ಮಾಡಬೇಕಾಗಿರುತ್ತದೆ. ಈ ಕುರಿತು ನಾಮಪತ್ರ ಸಲ್ಲಿಸುವ ದಿನಾಂಕ 30.12.2025 ರಿಂದ 12.01.2026 ರವರೆಗೆ ನಾಮಪತ್ರ ಸಲ್ಲಿಸುವುದು, ನಾಮಪತ್ರ ಪರಿಶೀಲನೆ ದಿನಾಂಕ 13.01.2026 ಹಾಗೂ ನಾಮಪತ್ರ ಹಿಂತೆದುಕೊಳ್ಳುವ ಕೊನೆಯ ದಿನಾಂಕ 16.01.2026 ಚುನಾವಣೆ ದಿನಾಂಕ 22.01.2026 ರಂದು ಜರುಗಿಸಲಾಗುವುದು ಎಂದು ರಾಯಚೂರು ಜಿಲ್ಲಾ ಪಂಚಾಯತ್ ಪ್ರಕಟಣೆ ತಿಳಿಸಿದೆ.

## ಅಪ್ರೆಂಟಿಸ್ ತರಬೇತಿಯ ತಾತ್ಕಾಲಿಕ ಆಯ್ಕೆಪಟ್ಟಿಗೆ ಆಕ್ಷೇಪಣೆ ಆಹ್ವಾನ

**ರಾಯಚೂರು,ಡಿ.29–** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಪತ್ರಿಕೋದ್ಯಮ ಪದವೀಧರರಿಗೆ ರಾಯಚೂರು ಜಿಲ್ಲೆಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಚೇರಿಯಲ್ಲಿ ಮಾಧ್ಯಮ ಚಟುವಟಿಕೆಗಳ ಕಾರ್ಯನಿರ್ವಹಣೆ ಕುರಿತು 12 ತಿಂಗಳ ಅವಧಿಯ ಅಪ್ರೆಂಟಿಸ್ ತರಬೇತಿಗೆ ಮೆರಿಟ್ ಆಧಾರದ ಮೇಲೆ ಆಯ್ಕೆಯಾದ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಈ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.

ಈ ಆಯ್ಕೆಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು 2026ರ ಜನವರಿ 3 ಕೊನೆಯ ದಿನವಾಗಿದೆ. ಜನವರಿ 3 ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಜನವರಿ 3ರೊಳಗೆ ಆಕ್ಷೇಪಣೆಗಳು ಬಾರದಿದ್ದಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳನ್ನೇ ಅಂತಿಮ ಆಯ್ಕೆಪಟ್ಟಿಗೆ ಪರಿಗಣಿಸಲಾಗುವುದು ಎಂದು ರಾಯಚೂರು ಜಿಲ್ಲಾ ವಾರ್ತಾಧಿಕಾರಿಗಳ ಕಚೇರಿಯ ಪ್ರಕಟಣೆ ತಿಳಿಸಿದೆ.

# ಸರಸ್ವತಿ ಶಿಕ್ಷಣ ವಿಕಾಸ ಸಮಿತಿಯ 42ನೇ ಶಾಲಾ ವಾರ್ಷಿಕೋತ್ಸವ



**ಬೀದರ್:ಡಿ.29:** ನಗರದ ನೇತಾಜಿನಗರ (ಶಹಾಗಂಜ್)ದಲ್ಲಿರುವ ಸರಸ್ವತಿ ಶಿಕ್ಷಣ ವಿಕಾಸ ಸಮಿತಿ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರಸ್ವತಿ ಶಿಶುಮಂದಿರ, ಹಿರಿಯ ಪ್ರಾಥಮಿಕ ಶಾಲೆ, ಶ್ರೀ ವಿದ್ಯಾರಣ್ಯ ಪ್ರೌಢಶಾಲೆ ಹಾಗೂ ಸರಸ್ವತಿ ಸ್ವತಂತ್ರ ಪದವಿಪೂರ್ವ ಕಾಲೇಜಿನ 42ನೇ ಶಾಲಾ ವಾರ್ಷಿಕೋತ್ಸವ ಶನಿವಾರ ಸರಸ್ವತಿ ಶಾಲಾ ಆವರಣದಲ್ಲಿ ವಿಜೃಂಭಣೆಯಿಂದ ನಡೆಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಸತೀಶ ಪಾಟೀಲ್ ಮಾತನಾಡಿ, ಶಾಲೆಯಲ್ಲಿ ಮಕ್ಕಳ ಸಂಖ್ಯೆ ಹೆಚ್ಚಿರುವುದರ ಜೊತೆಗೆ ಉತ್ತಮ ಸಂಸ್ಕಾರಗಳನ್ನೊಳಗೊಂಡ ಶಿಕ್ಷಣ ನೀಡುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ಹೇಳಿದರು.

ಶಾಲೆಯ ಹಿರಿಯ ವಿದ್ಯಾರ್ಥಿಯಾಗಿರುವ ಡಾ. ಶಾಂತಕುಮಾರ ಸಜ್ಜನ ಮಾತನಾಡಿ, ತಾವು ಕನ್ನಡ ಮಾಧ್ಯಮದಲ್ಲಿ ಓದಿದ್ದುದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ ಎಂದರು. ಮಕ್ಕಳು ಶ್ರಮಪಟ್ಟು ಓದಿ ಒಳ್ಳೆಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು, ಕೆಟ್ಟ ಅಭ್ಯಾಸಗಳಿಂದ ದೂರವಿರಬೇಕು ಹಾಗೂ ಸಾಮಾಜಿಕ ಜಾಲತಾಣಗಳ ದುರುಪಯೋಗ ತಪ್ಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಗುರುಗಳು ಮತ್ತು ತಂದೆ–ತಾಯಿಯರಿಗೆ ಗೌರವ ನೀಡುವ ಗುಣವನ್ನು ಸರಸ್ವತಿ ಶಾಲೆಯಲ್ಲಿ ಕಲಿತಿರುವುದಾಗಿ ಹೇಳಿದರು. ಅತಿಥಿಗಳಾಗಿ ವಿದ್ಯಾರ್ಥಿ ಪೋಷಕರು ಹಾಗೂ ಕೃಷಿಕರಾದ ಶ್ರೀ ಶಿವಕುಮಾರ ಥೆಂಪೆ ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಸ್ಥೆಯ ಕೋಶಾಧ್ಯಕ್ಷ ಶ್ರೀ ಎನ್. ಕೃಷ್ಣಾ ರೆಡ್ಡಿ ಮಾತನಾಡಿ, ಶಾಲೆಯಲ್ಲಿ ಕಲಿತ ಮಕ್ಕಳು ಉತ್ತಮ ಸಂಸ್ಕಾರಯುತ ದೇಶದ ನಾಗರಿಕರಾಗಬೇಕು ಎಂದು ಆಶಿಸಿದರು. ಮಾತೃಭಾಷೆಯಲ್ಲಿ ಶಿಕ್ಷಣ ಪಡೆದರೆ ಉನ್ನತ ಸಾಧನೆ ಸಾಧ್ಯವಾಗುತ್ತದೆ ಹಾಗೂ ಸರ್ವಾಂಗೀಣ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರಗಳು ಹಾಗೂ ಬಹುಮಾನಗಳನ್ನು ವಿತರಿಸಲಾಯಿತು.

ವೇದಿಕೆಯಲ್ಲಿ ಸಂಸ್ಥೆಯ ಅಧ್ಯಕ್ಷ ಪ್ರೊ. ಎಸ್. ಬಿ. ಸಜ್ಜನಶೆಟ್ಟಿ, ಕಾರ್ಯದರ್ಶಿ ಶ್ರೀ ಹನುಮಂತರಾವ ಪಾಟೀಲ, ಆಡಳಿತ ಮಂಡಳಿಯ ಪದಾಧಿಕಾರಿಗಳು, ವಿವಿಧ ಪ್ರಕಲ್ಪಗಳ ಮುಖ್ಯಗುರುಗಳು ಹಾಗೂ ಕಾಲೇಜಿನ ಪ್ರಾಂಶುಪಾಲರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸಿಬ್ಬಂದಿವರ್ಗ, ಪಾಲಕರು, ಪತ್ರಕರ್ತರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಅರುಣ ತರಗತಿಯ ವಂಶಿಕಾ ಸುನಿಲ ಜಾಂಪಡೆ ಶ್ಲೋಕ ಪಠಣ ಮಾಡಿದರು. ಉದಯ ತರಗತಿಯ ಪ್ರಿಯಾ ನಾಗೇಶ ಅಮೃತವಚನ ಹೇಳಿದರು. ಏಳನೇ ತರಗತಿಯ ಶ್ರೇಯಾ ಕಲ್ಲಪ್ಪ ಸ್ವಾಗತ ಹಾಗೂ ಪರಿಚಯ ಮಾಡಿಕೊಟ್ಟರೆ, ಆರನೇ ತರಗತಿಯ ಸಹನಾ ಮತ್ತು ಆರೋಹಿ ದೇಶಭಕ್ತಿ ಗೀತೆ ಹಾಡಿದರು. ಕುಮಾರಿ ಪುನರ್ವಿ ಶೀಲವಂತ ವಂದನಾರ್ಪಣೆ ಮಾಡಿದರೆ, ಶ್ರೀನಿಧಿ ಅಮರೇಶ್ವರ ಕಾರ್ಯಕ್ರಮ ನಿರೂಪಿಸಿದರು. ಸಾಮೂಹಿಕ ಶಾಂತಿ ಮಂತ್ರದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

# ಹೋಟೆಲ್ ಗೆ ಆಕಸ್ಮಿಕ ಬೆಂಕಿ: ಅಪಾರ ಹಾನಿ



**ವಿಜಯಪುರ, ಡಿ. 29:**ನಗರ ಹೊರ ವಲಯದ ಸೊಲ್ಲಾಪುರ ರಸ್ತೆಯಲ್ಲಿನ ಹೋಟೆಲವೊಂದಕ್ಕೆ ಭಾನುವಾರ ತಡರಾತ್ರಿ ಆಕಸ್ಮಿಕ ಬೆಂಕಿ ತಗುಲಿ ಧಗಧಗನೇ ಹೊತ್ತಿ ಉರಿದು ಅಪಾರ ಹಾನಿಯಾಗಿದೆ.

ಕೃಷ್ಣ ಪ್ಯಾಲೇಸ್ ಹೋಟೆಲ್ ನಲ್ಲಿ ಬೆಂಕಿ ಅವಘಡ ಸಂಭವಿಸಿದ್ದು, ಹೋಟೆಲ್ ಮುಂಭಾಗದಲ್ಲಿ ಬೆಂಕಿ ಕಾಣಿಸಿಕೊಂಡು ಧಗಧಗನೇ ಹೊತ್ತಿ ಉರಿಯುತ್ತಿರುವುದನ್ನು ಸಾರ್ವಜನಿಕರು ಗಮನಿಸಿ ಅಗ್ನಿಶಾಮಕದಳಕ್ಕೆ ಮಾಹಿತಿ ನೀಡಿದ್ದಾರೆ.

ಸುದ್ದಿ ತಿಳಿಯುತ್ತಿದ್ದಂತೆ ಅಗ್ನಿಶಾಮಕದಳದ ಸಿಬ್ಬಂದಿ ಘಟನಾಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸುವಲ್ಲಿ ಸುಮಾರು 1 ತಾಸಿಗೂ ಹೆಚ್ಚು ಕಾಲ ಹರ ಸಾಹಸ ಪಟ್ಟು ಬೆಂಕಿಯನ್ನು ಹತೋಟಿಗೆ ತಂದಿದ್ದಾರೆ. ರಾತ್ರಿ ಹೊತ್ತು ಹೋಟೆಲ್ ಬಂದ್ ಇದ್ದಿದ್ದರಿಂದ ಯಾವುದೇ ಸಾವು ನೋವು ಸಂಭವಿಸಿಲ್ಲ.

ಬೆಂಕಿ ಅವಘಡಕ್ಕೆ ನಿಖರ ಕಾರಣ ಗೊತ್ತಾಗಿಲ್ಲ. ವಿದ್ಯುತ್ ಶಾರ್ಟ್ ಸರ್ಕಿಟ್ ಅಥವಾ ಗ್ಯಾಸ್ ಲೀಕ್ ಆಗಿರಬಹುದು ಎಂದು ಪ್ರಾಥಮಿಕ ಮಾಹಿತಿ ಮೂಲಕ ತಿಳಿದು ಬಂದಿದೆ.

# ಕರ್ನಾಟಕಕ್ಕೆ ಸಗರನಾಡಿನ ಕೊಡುಗೆ ಅಪಾರ: ಮುಡುಬಿ ಗುಂಡೇರಾವ



**ಕಲಬುರಗಿ :ಡಿ.29:** ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು ಆಳಿದ ಪುಣ್ಯ ನೆಲ, ಪ್ರಾಚೀನ ಕಾಲದಿಂದಲೂ ಕರ್ನಾಟಕಕ್ಕೆ ಸಗರನಾಡಿನ ಕೊಡುಗೆ ಅಪಾರವಾಗಿದೆ ಎಂದು ಎಂದು ಸಂಶೋಧಕ ಮುಡುಬಿ ಗುಂಡೇರಾವ ಅಭಿಮತವ್ಯಕ್ತಪಡಿಸಿದರು.

ಅವರು ಜಿಲ್ಲೆಯ ಜೇವರ್ಗಿ ಪಟ್ಟಣದ ಹನುಮಾನ ಮಂದಿರದ ಪರಿಸರದಲ್ಲಿ ಬಸವೇಶ್ವರ ಸಮಾಜ ಸೇವಾ ಬಳಗ ಹಮ್ಮಿಕೊಂಡ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳ ಪರಿಚಯಾತ್ಮಕ –46 ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು, ಸಗರನಾದಿನಲ್ಲಿ ದೊರೆಯುವ ಪಾಚೀನ ಸ್ಮಾರಕಗಳು, ಕೋಟೆಕೊತ್ತಲಗಳು, ದೇವಾಲಯಗಳು, ಶಾಸನ, ವೀರಗಲ್ಲುಗಳು ಕನ್ನಡ ನಾಡಿನ ಇತಿಹಾಸದ ಪುಟ ತೆರೆಯುತ್ತವೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಪ್ರಧಾನ ಮಂತ್ರಿಯಾಗಿದ್ದ ಕೊಂಡುಗುಳಿ ಕೇಶಿರಾಜ, ಅಭಿನವ ಪಂಪ ನಾಗಚಂದ್ರ ಕವಿಗಳು ನಡೆದಾಡಿದ ಪುಣ್ಯಭೂಮಿ, ಬಸವೋತ್ತರ ಕಾಲಘಟ್ಟದಲ್ಲಿ ವಚನ ಚಳುವಳಿಯನ್ನು ಸಗರನಾಡಿನಲ್ಲಿ ಸಮರ್ಥವಾಗಿ ಮುಂದುವರೆಸಿದ ಷಣ್ಮುಖ ಶಿವಯೋಗಿಗಳು, ತತ್ವಪದಕರ ಕಡಕೋಳ ಮಡಿವಾಳಪ್ಪ, ಅರಳಗುಂಡಗಿಯ ಶರಣಬಸವೇಶ್ವರರು, ಅಂದೇಲಿಯ ಕರುಣೇಶ್ವರರು, ನೆಲೋಗಿಯ ಕೋಲ ಶಾಂತಯ್ಯ, ಆದ್ಯವಚನಕಾರ ದೇವರದಾಸಿಮಯ್ಯ, ತಿಂತಣಿ ಮೌನೇಶ್ವರರು ಮುಂತಾದ ಶರಣು ತಮ್ಮ ವಚನಗಳ ಮೂಲಕ ಸಮಾಜವನ್ನು ಪರಿವರ್ತನೆ ಮಾಡಿದ್ದಾರೆ . ಸಗರ ನಾಡಿನ ಇತಿಹಾಸವನ್ನು ಮಕ್ಕಳಿಗೆ ತಿಳಿಸಿಕೊಡುವ ಕೆಲಸವಾಗಬೇಕು ಎಂದರು.


ಬಳಗದ ಅಧ್ಯಕ್ಷ ಹೆಚ್ ಬಿ ಪಾಟೀಲ ಮಾತನಾಡಿ ನಮ್ಮ ಬಳಗದವತಿಯಿಂದ ಕಳೆದ ಒಂದುವರೆ ವರ್ಷದಿಂದ ಐತಿಹಾಸಿಕ ಜಾಗೃತಿ ಅಭಿಯಾನ ಹಮ್ಮಿಕೊಂಡು ಬರಲಾಗುತ್ತಿದೆ, ಜಿಲ್ಲೆಯ ಸ್ಮಾರಕಗಳ ರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ. ಪ್ರತಿಯೊಬ್ಬರೂ ಇತಿಹಾಸಿಕ ಸ್ಮಾರಕಗಳನ್ನು ಸಂಹರಕ್ಷಿಸುವ ಕೆಸ ಮಾಡಬೇಕು ಎಂದರು.

ಸಮಾಜ ಸೇವಕ ರವೀಂದ್ರಕುಮಾರ ವೈ ಕೋಳಕೂರ ಮಾತನಾಡಿ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳ ಬಗ್ಗೆ ಜಾಗೃತಿ ಮೂಡಿಸುತ್ತಿರುವ ಬಸವೇಶ್ವರ ಸೇವಾ ಬಳಗದ ಕೊಡುಗೆ ಅಪಾರವಾಗಿದೆ. ಸಗರ ನಾಡಿನ ಬಗ್ಗೆ ಹೊಸ ಸಂಶೋಧನೆಗಳು ಜರುಗಲಿ ಎಂದರು. ಪ್ರಾಚಾರ್ಯ ದೇವಿಂದ್ರ ಬಿ ಗುಡೂರು, ಮಹಾನಂದ ಹಿರೇಮಠ, ಶರಣಬಸಪ್ಪ, ಯಮನಪ್ಪ ಮುಂತಾದವರಿದ್ದರು.

ಜೇವರ್ಗಿ ತಾಲೂಕಿನ ಇತಿಹಾಸವೆಂದರೆ ಅದು ಕನ್ನಡ ನಾಡಿನ ಇತಿಹಾಸವಾಗಿದೆ, ಸಗರನಾಡಿನ ಕೊಡುಗೆ ಅಪಾರವಾಗಿದೆ, ಈ ನೆಲದ ಇತಿಹಾಸ ರೋಚಕವಾಗಿದೆ, ಅಭಿನವ ಪಂಪ ನಾಗಚಂದ್ರ, ಪ್ರಧಾನಿ ಮತ್ತು ಕವಿ ಕೊಂಡುಗುಳಿ ಕೇಶಿರಾಜ, ಶ್ರೇಷ್ಠ ವಚನಕಾರ ಷಣ್ಮುಖ ಶಿವಯೋಗಿಗಳು, ದೇವರದಾಸಿಮಯ್ಯ, ಕಡಕೋಳ ಮಡಿವಾಳಪ್ಪ ಮುಂತಾದ ಶರಣರು ಮಾಡಿದ ಸಮಾಜ ಪರಿವರ್ತನೆಯ ಕಾರ್ಯಗಳು ಭವಿಷ್ಯತ್ತಿಗೆ ದಾರಿದೀಪವಾಗಿವೆ.

ಮುಡುಬಿ ಗುಂಡೇರಾವ ಸಂಶೋಧಕ– ಸಾಹಿತಿಗಳು

## ಮೆಥೋಡಿಸ್ಟ್ ಚರ್ಚ್ ಪುನರ್ ನಿರ್ಮಾಣ ಭೂಮಿಪೂಜೆ ನೆರವೇರಿಸಿದ ಶಾಸಕ ಶರಣಗೌಡ ಕಂದಕೂರ



**ಗುರುಮಠಕಲ: ಡಿ.29:**ತಾಲೂಕಿನ ಯಲ್ಹೇರಿ ಗ್ರಾಮದ ಭಾರತೀಯ ಮೇಥೋಡಿಸ್ಟ್ ದೇವಾಲಯ ಯಲ್ಹೇರಿ ಮರು ನಿರ್ಮಾಣ ಕಾಮಗಾರಿಯ ಭೂಮಿ ಪೂಜೆಯನ್ನು ನೆರವೇರಿಸಿದ ಗೌರವಾನ್ವಿತ ಮುಖ್ಯ ಅತಿಥಿಗಳಾಗಿ ಆಗಮಿಸಿದ ಶಾಸಕ ಶರಣಗೌಡ ಕಂದಕುರ ಮಾತನಾಡಿ ಬಹು ವರ್ಷಗಳಿಂದ ಸಮೂದಾಯದವರ ಇಚ್ಛೆಯಂತೆ ನೂತನ ಚರ್ಚ್ ಕಟ್ಟಬೇಕೆಂಬ ತಮ್ಮೆಲ್ಲರ ಅಪೇಕ್ಷೆಯಂತೆ ಇವತ್ತು ಚರ್ಚ್ ಪುನರ್ ನಿರ್ಮಾಣ ಭೂಮಿ ಪೂಜೆ ನೆರವೇರುತ್ತಿರುವುದು ಮತ್ತು ಕಾರ್ಯರೂಪಕ್ಕೆ ಬಂದಿರುವುದು ಬಹಾಳ ಸಂತೋಷ.ಬೇರೆ ಧರ್ಮದಿಂದ ಬಂದಿದ್ದರು ಸಹ ಅನ್ಯಧರ್ಮದ ಬಗ್ಗೆ ಅಪಾರ ಪ್ರೀತಿ ವಿಶ್ವಾಸ ದಿಂದ.ಒಬ್ಬ ಶಾಸಕನಾಗಿ ಬರಲಾರದೆ ನಿಮ್ಮೆಲ್ಲರ ಪ್ರೀತಿ, ವಿಶ್ವಾಸ, ಸೋದರ ಮನೋಭಾವನೆ ಇಂದ ಬಂದಿದ್ದೆನೆ ಎಂದು ಹೇಳಿದರು.

ಧಾರೂರಿಗೆ ಪಾದಯಾತ್ರೆ ಮೂಖಾಂತರ ಬಂದು ಅಲ್ಲಿ ಪ್ರಭುವಿನ ದರ್ಶನ ಪಡೆದಿರುವುದನ್ನು ನೆನಪಿಸಿ ಕೊಂಡು, ಗ್ರಾಮದ ಅಭಿವೃದ್ಧಿಗೆ ಮತ್ತು ಜನರಿಗೆ ಒಳ್ಳೆಯ ಅರೋಗ್ಯ ಮತ್ತು ಚರ್ಚ್ ಗಳನ್ನು ಕಟ್ಟುವಂತಹ ದೊಡ್ಡ ಮನಸ್ಸು ಜನರಲ್ಲಿ ಬರಲಿ ಅನ್ನುವಂತಹ ಪ್ರಾಥನೆ ಮಾಡಿರೆಂದು ಹಾಗೂ ಭೂಮಿ ಪೂಜೆಯು ತಮ್ಮೆಲ್ಲರ ಸಮ್ಮುಖದಲ್ಲಿ ನೆರವೆರುತ್ತಿರುವುದು ಸಂತೋಷ ಆದರೆ ನೂತನ ಚರ್ಚ್ ಕಟ್ಟಡದ ಉಧ್ಘಾಟನೆಯು ಮಾಡಲಿಕ್ಕೆ ಬರುವೆ ಅವಾಗ ತವೆಲ್ಲಾರು ಬರಬೆಕೆದು ನೆರೆದಿರುವ ಅಪಾರ ಸಂಖ್ಯೆಯ ಜನರಲ್ಲಿ ಮತ್ತು ಚರ್ಚ್ ಮೇಲ್ವಿಚಾರಕರಲ್ಲಿ ಮನವಿ ಮಾಡಿದರು . ಈ ಸಂಧರ್ಭದಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಸುಭಾಷ್ ಕಟಕಟಿ ,ಅಜಯ್ ರೆಡ್ಡಿ, ರಾಮಣ್ಣ ಕೊಟಗೇರಿ, ಗ್ರಾಮಪಂಚಾಯಿತಿ ಅಧ್ಯಕ್ಷರು, ಚರ್ಚ್ ಜಿಲ್ಲಾ ಮೇಲ್ವಿಚಾರಕರು ಫಾನ.ಎಸ್. ನಂದೂಕುಮಾರ್, ಡಿ,ಎಸ್.ಫಾನ ಪಾಲ್ ಮಧುಕರ್,ಡಿ.ಎಸ್.ಫಾನ ಆನಂದ್ ಮೇತ್ರಿ, ಸಭಾ ಪಾಲಕರು ಯಲ್ಹೇರಿ ಫಾನ ಬಿ. ಸುನಿಲ್ ಕುಮಾರ್,ವಿಜಯ್ ಕುಮಾರ್ ಸೊಂಟಿ, ಡೇವಿಡ್ ಬೆಳ್ಳಿ,ರಾಜು, ಚಕ್ರ ಪ್ರಭಾಕರ್ ಬೆಳ್ಳಿ, ಸುನಿಲ್, ರಾಜಪ್ಪ ಗ್ರಾಮದ ಸಾರ್ವಜನಿಕರು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿರು ಉಪಸ್ಥಿತರಿದ್ದರು.

# ಕಲಾವಿದರ ಪ್ರತಿಭೆಗೆ ಹೆಚ್ಚು ಅವಕಾಶ ಲಭಿಸಲಿ : ಶಾಸಕ ವೇಣುಗೋಪಾಲ ನಾಯಕ



**ಯಾದಗಿರಿ:ಡಿ.29:**ಈ ಭಾಗದ ಅನೇಕ ಜನ ಪ್ರತಿಭಾವಂತ ಕಲಾವಿದರಿಗೆ ಇನ್ನು ಹೆಚ್ಚು ಅವಕಾಶಗಳನ್ನ ಮುಂದಿನ ದಿನಗಳಲ್ಲಿ ನೀಡುವಲ್ಲಿ ಶ್ರಮಿಸುತ್ತೇನೆ ಎಂದು ಶಾಸಕ ರಾಜಾ ವೇಣುಗೋಪಾಲ ನಾಯಕ ಹೇಳಿದರು,

ಸುರಪುರ ಸಮೀಪದ ನರಸಿಂಗಪೇಟೆಯಲ್ಲಿ ಇಂದು ಆಯೋಜಿಸಿದ್ದ, ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿಗೆ ಭಾಜನರಾದ ಕಲಾವಿದ ಹನುಮಂತ ಈರಗೊಟ ಅವರ ಸನ್ಮಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು ಇತ್ತೀಚಿನ ದಿನಗಳಲ್ಲಿ ಜಾನಪದ ಕಲೆ,ಸಂಸ್ಕೃತಿ ಮೇಲೆ ಜನರಿಗೆ ಹೆಚ್ಚು ಆಸಕ್ತಿ ಬರುತ್ತಿದ್ದು ಇಂತಹ ಕಲೆ ಸಂಸ್ಕೃತಿ ಪರಂಪರೆಯನ್ನು ಉಳಿಸಿ ಬೆಳೆಸುವಲ್ಲಿ ನಾನು ನಿರಂತರವಾಗಿ ಶ್ರಮಿಸುತ್ತೇನೆ ನಮ್ಮ ಭಾಗದ ಮೂಲ ಕಲಾವಿದರಿಗೆ ಸರ್ಕಾರ ಮಟ್ಟದಲ್ಲಿ ಗುರುತಿಸಲು ಶ್ರಮ ವಹಿಸುತ್ತೇನೆ ಎಂದು ಶಾಸಕರು ಹೇಳಿದರು, ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರಾದ ಚನ್ನಬಸಪ್ಪ ಮುಧೋಳ ಮಾತನಾಡಿ ನರಸಿಂಗಪೇಟ್ ಪರಿಸರಕ್ಕೆ ಜಾನಪದದ ಹಿನ್ನೆಲೆ ಇದೆ, ಇಲ್ಲಿ ಮೊಹರಂ ಸಂಭ್ರಮ ಭಜನಾ ಸಂಭ್ರಮ ಜಾನಪದ ಹಾಡುಗಳ ದೊಡ್ಡ ಸುಗ್ಗಿಯೇ ನಡೆಯುತ್ತದೆ,ಇಂತ ಒಬ್ಬ ಮೂಲ ದೇಶೀ ಪ್ರತಿಭೆ ಕಲಾವಿದನನ್ನು ಅಕಾಡೆಮಿ ಗುರುತಿಸಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸಗರನಾಡು ಸೇವಾ ಪ್ರತಿಷ್ಠಾನ ಅಧ್ಯಕ್ಷ ಪ್ರಕಾಶ ಅಂಗಡಿ ಕನ್ನೆಳ್ಳಿ ಮಾತನಾಡಿ ಇತ್ತೀಚಿನ ದಿನಗಳಲ್ಲಿ ನಮ್ಮ ಸುರಪುರ ತಾಲೂಕಿನ ಅನೇಕ ಕಲಾವಿದರಿಗೆ ಸರಕಾರದ ವಿವಿಧ ಅಕಾಡೆಮಿಗಳ ವಾರ್ಷಿಕ ಮತ್ತು ಗೌರವ ಪ್ರಶಸ್ತಿಗಳು ಲಭಿಸುತ್ತಿರುವುದು ತುಂಬಾ ಉತ್ತಮ ಬೆಳವಣಿಗೆ ಮುಂದಿನ ದಿನಗಳಲ್ಲಿ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ವಿಶ್ವವಿದ್ಯಾಲಯದ ದತ್ತಿ ಗೌರವ ಪ್ರಶಸ್ತಿಗಳು ಕೂಡ ಈ ಭಾಗದ ಕಲಾವಿದರಿಗೆ ಲಭಿಸಲಿ, ಇಂತಹ ಮೂಲ ಕಲಾವಿದರನ್ನು ಪರಿಚಯಿಸುವ ಪುಸ್ತಕಗಳು ಅಕಾಡೆಮಿ ಮತ್ತು ಪ್ರಸಾರಂಗಗಳ ಮೂಲಕ ಎಂದು ಆಶಯ ವ್ಯಕ್ತಪಡಿಸಿದರು, ಕುಂಬಾರಪೇಟದ ಶರಣಯ್ಯ ಮುತ್ಯ ಸಾನಿದ್ಯ ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಜಾನಪದ ಅಕಾಡೆಮಿ ಸದಸ್ಯ ಶಿವಮೂರ್ತಿ ತನಿಖೆದರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನಿಂಗರಾಜ ಭಾಚಿಮಟ್ಟಿ ನಗರಸಭ ಸದಸ್ಯ ಜುಮ್ಮಣ್ಣ, ಮುಖಂಡರಾದ ಮಲ್ಲಣ್ಣ ಸಾಹುಕಾರ ಮುಧೋಳ, ಅಬ್ದುಲ ಗಫಾರಿ ನಗನೂರಿ, ರಂಗನಗೌಡ ದೇವಿಕೇರಿ,ಬೀರ ಲಿಂಗಪ್ಪ ಬಾದ್ಯಾಪೂರ, ಷಣ್ಮುಖಯ್ಯ ಸ್ವಾಮಿ,ಶರಣಪ್ಪ ಮುಧೋಳ, ದೇವಪ್ಪ ಮುಧೋಳ, ಸೂಗಪ್ಪ ಗೊಬ್ಬುರ, ಅಕ್ಷಯ ಶೆತ, ಶರಣಪ್ಪ ಹಂಗರಗಿ, ಸೇರಿದಂತೆ ಇತರರಿದ್ದರು, ಇದೇ ಸಂದರ್ಭದಲ್ಲಿ ಅಕಾಡೆಮಿ ಪ್ರಶಸ್ತಿಗೆ ಭಾಜನರಾದ ಹನುಮಂತ ಈರಗೊಟ ದಂಪತಿಗಳಿಗೆ ವಿಶೇಷವಾಗಿ ಸನ್ಮಾನಿಸಲಾಯಿತು, ಬಸವರಾಜ ತನಿಕೆದಾರ ಪ್ರಾರ್ಥಿಸಿದರು ಕಾರ್ಯಕ್ರಮವನ್ನು ಬಸವಣ್ಣಪ್ಪ ಹಂಗರಗಿ ನಿರೂಪಿಸಿ ವಂದಿಸಿದರು,

# ಮರ್ಯಾದೆ ಹೀನ ಹತ್ಯೆಗಳಿಗೆ ರಾಜಕೀಯವೇ ಸೂತ್ರಧಾರ: ಶಿಲ್ಪಾ. ಬಿ.ಕೆ.



**ಯಾದಗಿರಿ,ಡಿ.29**–ನಗರದಲ್ಲಿ ಭಾನುವಾರ ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆಯ ಜಿಲ್ಲಾ ಕಛೇರಿಯಲ್ಲಿ 72 ನೇ ಸಂಸ್ಥಾಪನಾ ದಿನವನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ಕೆಪಿಎಸ್– ಮ್ಯಾಗ್ನೆಟ್ ಯೋಜನೆಯ ಹೆಸರಲ್ಲಿ ಮುಚ್ಚಲು ಹೊರಟಿರುವ ರಾಜ್ಯದ 40,000 ಸರ್ಕಾರಿ ಶಾಲೆಗಳನ್ನು ಉಳಿಸುವ ಸಂಕಲ್ಪ ತೆಗೆದುಕೊಳ್ಳಲಾಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಎಐಡಿಎಸ್‌ಓ ಜಿಲ್ಲಾ ಸಂಚಾಲಕರಾದ ಶಿಲ್ಪಾ ಬಿ ಕೆ ಮಾತನಾಡುತ್ತಾ, ಕಳೆದ 7 ದಶಕಗಳಿಂದ ದೇಶದಾದ್ಯಂತ ವೈಜ್ಞಾನಿಕ, ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ ಹಾಗೂ ಸಾರ್ವತ್ರಿಕ ಶಿಕ್ಷಣ ನಮ್ಮದಾಗಬೇಕು ಎಂಬ ಧ್ಯೇಯದೊಂದಿಗೆ ಕೆಲಸ ಮಾಡುತ್ತಿರುವ ಎಐಡಿಎಸ್‌ಓ ಯಾದಗಿರಿಯಲ್ಲಿಯೂ ಸಹ ಬಹಳ ಸಕ್ರಿಯವಾಗಿ ಶಿಕ್ಷಣ ವಿರೋಧಿ ನೀತಿಗಳ ವಿರುದ್ಧ ಬಲಿಷ್ಠ ಚಳುವಳಿಗಳನ್ನು ಬೆಳೆಸುತ್ತಿದೆ. ನವೋದಯದ ಮಹಾನ್ ಚೇತನಗಳಾದ ಈಶ್ವರಚಂದ್ರ ವಿದ್ಯಾಸಾಗರ್, ಜ್ಯೋತಿಬಾ ಫುಲೆ, ಸಾವಿತ್ರಿಬಾಯಿ ಫುಲೆ ರ ಮೂಲ ಆಶಯವಾದ ಸಾರ್ವತ್ರಿಕ ಶಿಕ್ಷಣವನ್ನು ಇಂದು ರಾಜ್ಯ ಕಾಂಗ್ರೆಸ್ ಸರ್ಕಾರ ಕೆಪಿಎಸ್ ಮ್ಯಾಗ್ನೆಟ್ ಯೋಜನೆಯ ಹೆಸರಲ್ಲಿ ವ್ಯಾಪಾರಕ್ಕಿಟ್ಟಿದೆ. ದುಡಿಯುವ ವರ್ಗದ ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿಸುವ ಹುನ್ನಾರದಿಂದ ಶಿಕ್ಷಣವನ್ನು ಖಾಸಗಿಯವರ ಮಡಿಲಿಗೆ ಹಾಕಲಾಗುತ್ತಿದೆ.

ರಾಜ್ಯದಲ್ಲಿ 40,000 ಸರ್ಕಾರಿ ಶಾಲೆಗಳನ್ನು ಮುಚ್ಚುವುದರ ಮೂಲಕ ಶಾಶ್ವತವಾಗಿ ಬಡ ಮಕ್ಕಳಿಗಿರುವ ಜ್ಞಾನದ ಬಾಗಿಲನ್ನು ಮುಚ್ಚಿ, ಶಿಕ್ಷಣದಿಂದ ಸಂಪೂರ್ಣವಾಗಿ ಅವರನ್ನು ವಂಚಿತರನ್ನಾಗಿ ಮಾಡಲು ರಾಜ್ಯ ಸರ್ಕಾರ ಮುಂದಾಗಿದೆ. ನಮ್ಮ ದೇಶದ ನವೋದಯ ಚಿಂತಕರ, ಕ್ರಾಂತಿಕಾರಿಗಳ ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಹೋರಾಟ ಹಾಗೂ ಸಂಘರ್ಷಗಳ ಫಲವಾಗಿ ನಮಗೆ ದೊರೆತ ಈ ಶಿಕ್ಷಣದ ಹಕ್ಕನ್ನು ಕಸಿದು, ಅವರೆಲ್ಲರ ಆಶಯಗಳನ್ನು ಗಾಳಿಗೆ ತೂರಿ ಶಿಕ್ಷಣವನ್ನು ಕೇವಲ ಕೆಲವರ ಸ್ವತ್ತಾಗಿಸಲು ರಾಜ್ಯ ಸರ್ಕಾರ ಹುನ್ನಾರ ನಡೆಸಿದೆ. ಹೀಗಿರುವಾಗ ಈ ಯೋಜನೆಯ ಕುತಂತ್ರವನ್ನರಿತ ರಾಜ್ಯದ ಜನತೆ ಇದನ್ನು ಒಕ್ಕೊರಲಿನಿಂದ ವಿರೋಧಿಸಲು ಪ್ರಾರಂಭಿಸಿದ್ದಾರೆ. ನಮ್ಮೂರಿನ ಸರ್ಕಾರಿ ಶಾಲೆಗಳು ನಮ್ಮ ಹಕ್ಕು, ನಾವು ಯಾವ ಕಾರಣಕ್ಕೂ ಶಾಲೆಗಳನ್ನು ಮುಚ್ಚಲು ಬಿಡುವುದಿಲ್ಲ ಎಂದು ಕೆಪಿಎಸ್ ಮ್ಯಾಗ್ನೆಟ್ ಯೋಜನೆಯನ್ನು ಧಿಕ್ಕರಿಸುತ್ತಿದ್ದಾರೆ. ಇದು ಬಹಳ ಆಶಾದಾಯಕ ಸಂಗತಿ ಎಂದರು.

ಮುಂದುವರೆದು ಮಾತನಾಡಿದ ಅವರು, ಹಿಂದೊಮ್ಮೆ ಎಲ್ಲಾ ರೀತಿಯ ಗುಲಾಮಗಿರಿಯ ವಿರುದ್ಧ ನಾವು ಸಿಡಿದೆದ್ದು ಜಾಗೃತರಾಗುವಂತೆ ಶಿಕ್ಷಣ ನಮ್ಮೆಲ್ಲರನ್ನು ಉಳಿಸಿತ್ತು. ಆದರೆ ಇಂದು ಆಳುವ ಸರ್ಕಾರಗಳ ಜನವಿರೋಧಿ ನೀತಿಗಳಿಂದಾಗಿ ನಾವೇ ಶಿಕ್ಷಣವನ್ನುಳಿಸಬೇಕಾದ ಸಂದರ್ಭ ಬಂದೊದಗಿದೆ. ಇತ್ತೀಚಿಗೆ ರಾಜ್ಯದಲ್ಲಿ ನಡೆದ ಮರ್ಯಾದೆ ಹೀನ ಹತ್ಯೆಯು ಇಡೀ ನಾಗರೀಕ ಸಮಾಜ ತಲೆತಗ್ಗಿಸುವಂತಿದೆ. ನಮ್ಮನ್ನಾಳುವ ಸರ್ಕಾರಗಳು ಜನಗಳ ಹಳೆಯ ಮಾನಸಿಕತೆಯನ್ನು ತೆಗೆಯಲು ಯಾವ ಪ್ರಯತ್ನಗಳನ್ನೂ ಮಾಡದೇ, ಬದಲಿಗೆ ಜಾತಿ ವ್ಯವಸ್ಥೆಯನ್ನು ಜೀವಂತವಾಗಿಡುವಲ್ಲಿ ವ್ಯಸ್ತರಾಗಿದ್ದಾರೆ. ತಮ್ಮ ರಾಜಕೀಯ ಲಾಭಕ್ಕಾಗಿ ಜನರಲ್ಲಿ ಜಾತಿ ಧರ್ಮಗಳ ವಿಷ ಬೀಜ ಬಿತ್ತಿ, ಮಾನವೀಯ ಮೌಲ್ಯಗಳ ಮಾರಣಹೋಮ ನಡೆಸಿದ್ದಾರೆ. ಹೀಗಿರುವಾಗ ಬಹಳ ಮಹತ್ತರ ಪಾತ್ರವನ್ನು ವಹಿಸುವ ಶಿಕ್ಷಣಕ್ಕೆ ಪ್ರಮುಖ ಆದ್ಯತೆ ಕೊಡಬೇಕಾಗಿರುವುದು ಸರ್ಕಾರಗಳ ಆದ್ಯ ಕರ್ತವ್ಯವಾಗಬೇಕಿದೆ. ಈ ಐತಿಹಾಸಿಕ ಜವಾಬ್ದಾರಿಯನ್ನು ಅರಿತು ಸಾರ್ವಜನಿಕ ಶಿಕ್ಷಣ ಉಳಿಸಲು ರಾಜ್ಯದ ಎಲ್ಲಾ ಶಿಕ್ಷಣ ಪ್ರೇಮಿ ಜನತೆ ಸಂಕಲ್ಪ ತೊಡೋಣ. ಈ ಹಿನ್ನಲೆಯಲ್ಲಿ ಇಡೀ ರಾಜ್ಯದ ವಿದ್ಯಾರ್ಥಿಗಳು ಹಾಗೂ ಪೋಷಕರು ಸಾರ್ವಜನಿಕ ಶಿಕ್ಷಣವನ್ನು ಉಳಿಸಲು ಮುಂಬರ ಬೇಕು ಎಂದು ಕರೆ ನೀಡಿದರು. ಈ ಸಂದರ್ಭದಲ್ಲಿ ನಾಗರಾಜ್, ವಿಕ್ರಮ್, ನಿತೇಶ್, ಕಾವೇರಿ, ದರ್ಶನ್, ಸುದೀಪ್, ಶಿವಾಜಿ, ಕಾರ್ತಿಕ್ ಹಾಗೂ ಹರೀಶ್ ಸೇರಿದಂತೆ ಅನೇಕ ಎಐಡಿಎಸ್‌ಓ ಕಾರ್ಯಕರ್ತರು ಈ ಸಂದರ್ಭದಲ್ಲಿ ಹಾಜರಿದ್ದರು.

# ಮಾನವಿ ಖಾಸಗಿ ಶಾಲಾ ಶಿಕ್ಷಣ ಸಂಸ್ಥೆಗಳ ಒಕ್ಕೂಟ ವತಿಯಿಂದ ಕುವೆಂಪು ಜನ್ಮದಿನಾಚರಣೆ ಹಾಗೂ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ



ಧೈರ್ಯದ ದಾರಿ

ಮಾನ್ವಿ,ಡಿ.29–ತಾಲೂಕಿನ ಸರ್ವೋದಯ ಶಿಕ್ಷಣ ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟ ಪದಗ್ರಹಣ ಕಾರ್ಯಕ್ರಮವು ಕುವೆಂಪು ಅವರ ಜನ್ಮದಿನಾಚರಣೆ ಪ್ರಯುಕ್ತ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡುವುದರ ಮುಖಾಂತರ ಆರಂಭವಾಯಿತು.

ಈ ಸಂದರ್ಭದಲ್ಲಿ ನೂತನವಾಗಿ ಆಯ್ಕೆಯಾದಂತಹ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷರು ರಾಜ ಸುಭಾಷ್‌ಚಂದ್ರ ನಾಯಕ್ ಪ್ರಧಾನ ಕಾರ್ಯದರ್ಶಿ ರಾಜು ತಾಳಿಕೋಟೆ, ಸಹಕಾರ್ಯದರ್ಶಿ ಅಖಿಲೇಶ್ ಕುರುಡಿ, ಖಜಾಂಚಿ ಶರಣಬಸವ, ಉಪಾಧ್ಯಕ್ಷ ಭೀಮರಾಯ ಸೀತಾಮನಿ, ಶಶಿಕಲಾ ಪಾಟೀಲ್ ಎಂ.ಎ.ಎಚ್ ಮುಖೀಮ್, ಸಂಘಟನಾ ಕಾರ್ಯದರ್ಶಿ ಸಂದೀಪ್, ನಿಕಟಪೂರ್ವ ಅಧ್ಯಕ್ಷ ಎಚ್ ಶರ್ಫುದ್ದೀನ್ ಕಾನೂನು ಸಲಹೆಗಾರರಾದ ಲಕ್ಷ್ಮೀದೇವಿ, ಹಾಗೂ ಸರ್ವೋದಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ಮನೋಜ್ ಕುಮಾರ್ ಮಿಶ್ರಾ ಕಾರ್ಯದರ್ಶಿಗಳು ಅನಿಲ್ ಕುಮಾರ ಎಚ್ ಉಪಸ್ಥಿತರಿದ್ದರು.

# ಜವಳಗೆರೆ ಗ್ರಾಮದಲ್ಲಿ ಅಬಕಾರಿ ಸಚಿವ ಆರ್. ಬಿ. ತಿಮ್ಮಾಪುರ ಅವರಿಗೆ ಗೌರವ ಸನ್ಮಾನ

ಧೈರ್ಯದ ದಾರಿ

**ಜವಳಗೆರೆ : ಡಿ 29:** ಗ್ರಾಮದಲ್ಲಿ ಅಬಕಾರಿ ಸಚಿವ ಆರ್. ಬಿ. ತಿಮ್ಮಾಪುರ ಅವರಿಗೆ ಗೌರವ ಸನ್ಮಾನ ಕಾರ್ಯಕ್ರಮದ ನಿಮಿತ್ತ ರಾಯಚೂರಿಗೆ ಆಗಮಿಸಿ, ಸಿಂಧನೂರು ನಗರದ ಕಡೆಗೆ ಪ್ರಯಾಣ ಬೆಳೆಸುತ್ತಿದ್ದ ಕರ್ನಾಟಕ ಸರಕಾರದ ಅಬಕಾರಿ ಸಚಿವರಾದ ಆರ್. ಬಿ. ತಿಮ್ಮಾಪುರ ಅವರಿಗೆ ದಾರಿ ಮಧ್ಯದಲ್ಲಿ ಜವಳಗೆರೆ ಗ್ರಾಮ ಅಂಬೇಡ್ಕರ್ ಮೈದಾನದ ಹತ್ತಿರ ಭವ್ಯ ಸ್ವಾಗತ ಹಾಗೂ ಗೌರವ ಸನ್ಮಾನ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಶ್ರೀ ಆರೋಗ್ಯಪ್ಪ, ದಲಿತ ಸಂಘಟನೆಯ ಮುಖಂಡರಾದ ಜಾನಪ್ಪ, ದೊಡ್ಡಮನಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯರಾದ ಅಯ್ಯಪ್ಪ ದೊಡ್ಡಮನಿ, ರಮೇಶ್ ಮಾಸ್ಟರ್ , ರಮೇಶ್ ತಂದೆ ಯಮುನಪ್ಪ, ಪ್ರಸಾದ್, ಪುನೀತ್ ಸೇರಿದಂತೆ ಇತರರು ಸಚಿವರಿಗೆ ಶಾಲು ಹಾರ ಹಾಕಿ ಗೌರವ ಸಮರ್ಪಿಸಿದರು.



ಅದೇ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರು ಹಾಗೂ ದಲಿತ ನಾಯಕರಾದ ಬಾಲಸ್ವಾಮಿ ಕೊಡ್ಲಿ ಅವರಿಗೂ ಗೌರವ ಸನ್ಮಾನ ಸಲ್ಲಿಸಿ, ಅವರ ಸಾಮಾಜಿಕ ಸೇವೆ ಹಾಗೂ ಸಂಘಟನಾ ಕಾರ್ಯವನ್ನು ಪ್ರಶಂಸಿಸಲಾಯಿತು.

# ಮಸ್ಕಿಯಲ್ಲಿ ಕೆ.ಶಿವನಗೌಡ ನಾಯಕ ಅಭಿಮಾನಿ ಬಳಗದಿಂದ ಹೊಸ ವರ್ಷದ ಕ್ಯಾಲೆಂಡರ್ ಹಂಚಿಕೆ



ಧೈರ್ಯದ ದಾರಿ

**ಮಸ್ಕಿ ,ಡಿ.29–** ದೇವದುರ್ಗ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಕೆ. ಶಿವನಗೌಡ ನಾಯಕ ಅವರ ಅಭಿಮಾನಿ ಬಳಗದಿಂದ 2026ರ ಹೊಸ ವರ್ಷದ ಕ್ಯಾಲೆಂಡರನ್ನು ಕ್ಷೇತ್ರದ ಪ್ರತಿಯೊಂದು ಹಳ್ಳಿಗಳಲ್ಲಿ ಹಂಚಿಕೆ ಮಾಡಲಾಗುತ್ತಿದೆ ಎಂದು ತಾಲೂಕು ಪಂಚಾಯತಿ ಮಾಜಿ ಅಧ್ಯಕ್ಷ ಶಿವಣ್ಣ ನಾಯಕ ವೆಂಕಟಾಪೂರು ತಿಳಿಸಿದರು.

ಕೆ.ಶಿವನಗೌಡ ನಾಯಕ ಅವರು ತಮ್ಮ ಅಧಿಕಾರ ಅವಧಿಯಲ್ಲಿ ಜಿಲ್ಲೆಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದು ಆದ್ದರಿಂದ ಇಂದು ರಾಯಚೂರು ಜಿಲ್ಲೆಯ ಪ್ರತಿಯೊಂದು ಕ್ಷೇತ್ರದಲ್ಲಿ ಹಾಗೂ ಪ್ರತಿಯೊಂದು ಹಳ್ಳಿಗಳಲ್ಲಿಯೂ ಅವರ ಅಭಿಮಾನಿಗಳು ಇದ್ದಾರೆ. ನಾವು ಕೂಡ ಕೆ ಶಿವನಗೌಡ ನಾಯಕರು ಅಭಿಮಾನಿಗಳು ಆದ್ದರಿಂದ ನಾವು ಅವರ ಮೇಲಿನ ಅಭಿಮಾನದಿಂದ ನೂತನ ವರ್ಷದ ಕ್ಯಾಲೆಂಡರ್ ಅನ್ನು ಮಸ್ಕಿ ಕ್ಷೇತ್ರದಲ್ಲಿ ಬಿಡುಗಡೆ ಮಾಡಿ ಪ್ರತಿಯೊಬ್ಬ ಅವರ ಅಭಿಮಾನಿಗಳಿಗೂ ನೂತನ ವರ್ಷದ ಕ್ಯಾಲೆಂಡರ್ ಅನ್ನು ತಲುಪಿಸುವ ಕಾರ್ಯವನ್ನು ಅಭಿಮಾನಿಗಳ ಬಳಗದಿಂದ ಹಂಚಿಕೆ ಮಾಡಲಾಗುತ್ತಿದೆ.

ಶಿವನಗೌಡ ನಾಯಕ ಅವರ ಅಭಿಮಾನಿಗಳು ಸ್ವಯಂ ಪ್ರೇರಣೆಯಿಂದ ಕಳೆದ ಎರಡ್ಮೂರು ದಿನಗಳಿಂದ ಕ್ಷೇತ್ರದ ವಿವಿಧ ಹಳ್ಳಿಗಳಲ್ಲಿ ಕ್ಯಾಲೆಂಡರ್ ಹಂಚಿಕೆ ಮಾಡಿದ್ದಾರೆ. ಅದೇ ರೀತಿಯಾಗಿ ಕ್ಷೇತ್ರದ ಪ್ರತಿಯೊಂದು ಹಳ್ಳಿಗೂ 2026ರ ಹೊಸ ವರ್ಷದ ಕ್ಯಾಲೆಂಡರ್ ನ್ನು ತಲುಪಿಸಲಾಗುತ್ತದೆ ಎಂದು ತಿಳಿಸಿದರು.



ಧೈರ್ಯದ ದಾರಿ

ಸೋಮವಾರ ಮಾನ್ವಿ ನಗರಕ್ಕೆ ಆಗಮಿಸಿದ್ದ ಕರ್ನಾಟಕ ಸರ್ಕಾರದ ಅಬಕಾರಿ ಇಲಾಖೆ ಸಚಿವರಾದ ಆರ್ ಬಿ ತಿಮ್ಮಾಪುರ ಅವರಿಗೆ ಸೈಯದ್ ನಜರುದ್ದೀನ್ ಖಾದ್ರಿ ಮತ್ತು ಸೈಯದ್ ಮುಜ್ತಾಬ್ ಖಾದ್ರಿ.ಹಿದಾಯತ್ ನಾಯಕ್ . ಹುಸೇನ್ ಬಾಷಾಅವರಿಂದ ಸನ್ಮಾನ ಮಾಡಲಾಯಿತು

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE